# ಧ್ಯೇಯ ಕಮಲ

ಉತ್ತಿಷ್ಠ ಭಾರತ

ಮಾಸ ಪತ್ರಿಕೆ

ಜನವರಿ 2011

ಸಂಪುಟ - 4 ಸಂಚಿಕೆ - 4

ಪ್ರಕಾಶಕರು
ಎಸ್. ಸುರೇಶ್ ಕುಮಾರ್

ಸಂಪಾದಕರು
ಎಂ.ಬಿ. ಭಾನುಪ್ರಕಾಶ್

ಸಂಪಾದಕ ಮಂಡಳಿ
ಡಾ|| ಮಮ್ತಾಜ್ ಅಲಿಖಾನ್
ಗಣೇಶ ಯಾಜಿ

ಮುದ್ರಣ :
ರಾಷ್ಟ್ರೋತ್ಥಾನ ಮುದ್ರಣಾಲಯ,
ಕೇಶವ ಶಿಲ್ಪ, ಕೆಂಪೇಗೌಡ ನಗರ,
ಬೆಂಗಳೂರು - 560 019.

ವಾರ್ಷಿಕ ಚಂದಾ : 100 ರೂ.
ಬಿಡಿ ಪ್ರತಿ : 10 ರೂ.



ವಿವರಗಳಿಗೆ ಸಂಪರ್ಕಿಸಿ :
**ಧ್ಯೇಯಕಮಲ ಕನ್ನಡ ಮಾಸಪತ್ರಿಕೆ,**
**ಬಿಜೆಪಿ ರಾಜ್ಯ ಕಾರ್ಯಾಲಯ,**
ನಂ. 11, 12ನೇ ಮುಖ್ಯರಸ್ತೆ,
16ನೇ ಅಡ್ಡರಸ್ತೆ, ಮಲ್ಲೇಶ್ವರಂ ಪಶ್ಚಿಮ
ಬೆಂಗಳೂರು - 560 055.
ದೂ. : 080-22041976
ಫ್ಯಾಕ್ಸ್ : 080-23460398
Email: bjponline@gmail.com
ganeshyaji@yahoo.co.in


## ಸಂಪಾದಕೀಯ....

ರಾಜ್ಯಾದ್ಯಂತ ತೀವ್ರ ಕುತೂಹಲ ಕೆರಳಿಸಿದ್ದ ಜಿ.ಪಂ. ಮತ್ತು ತಾ.ಪಂ. ಚುನಾವಣೆಗಳಲ್ಲಿ ಬಿಜೆಪಿ ಮೇಲುಗೈ ಸಾಧಿಸಿದೆ. 30 ಜಿ.ಪಂ. ಪೈಕಿ 12ರಲ್ಲಿ ನಿಚ್ಚಳ ಬಹುಮತ ಪಡೆದು ಅಧಿಕಾರದ ಗದ್ದುಗೆ ಹಿಡಿಯಲಿದೆ. ಕಾಂಗ್ರೆಸ್ ಹಾಗೂ ಜೆಡಿಎಸ್ ತಲಾ ನಾಲ್ಕು ಜಿ.ಪಂ.ಗಳಲ್ಲಿ ಬಹುಮತ ಪಡೆದಿವೆ. ಇವೆರಡೂ ಸೇರಿದರೂ ಬಿಜೆಪಿಯ ಸಮಬಲಕ್ಕೆ ಬರದಿರುವುದು ಗಮನಾರ್ಹ.

ಈ ವಿಜಯವನ್ನು ಸಾಕಾರಗೊಳಿಸುವಲ್ಲಿ ಶ್ರಮಿಸಿದ ಬಿಜೆಪಿಯ ತಳಮಟ್ಟದ ಕಾರ್ಯಕರ್ತರು ಅಭಿನಂದನೆಗೆ ಪಾತ್ರರು.

ಮೊದಲ ದಿನದಿಂದಲೇ ಬಿಜೆಪಿ ಸರ್ಕಾರ ಎದುರಿಸಿದಂತಹ ಅಗ್ನಿಪರೀಕ್ಷೆಯನ್ನು ಯಾವ ಸರ್ಕಾರವೂ ಎದುರಿಸಿರಲಿಕ್ಕಿಲ್ಲ. ಇಲ್ಲ ಸಲ್ಲದ ಆಪಾದನೆಗಳೊಂದಿಗೆ ದಿನನಿತ್ಯವೂ ಮಾಧ್ಯಮದೆದುರು ಹಾಜರಾಗುತ್ತ ಜನರಿಂದ ಆಯ್ಕೆಯಾದ ಸರ್ಕಾರವನ್ನು ಕೆಡಹುವ ಜೆಡಿಎಸ್ ಹಾಗೂ ಕಾಂಗ್ರೆಸ್ ಹುನ್ನಾರಕ್ಕೆ ರಾಜ್ಯದ ಗ್ರಾಮೀಣ ಜನತೆ ಇನ್ನೊಮ್ಮೆ ತಣ್ಣೀರೆರಚಿದ್ದಾರೆ.

ಆಡಳಿತದಲ್ಲಿರುವ ಪಕ್ಷ ಜಿ.ಪಂ., ತಾ.ಪಂ. ಚುನಾವಣೆ ಗೆಲ್ಲುವುದು ಅನಿವಾರ್ಯ ಎನ್ನುವಂತೆ ಕೆಲವರ ವಾದವಿದೆ. ಆದರೆ ಪಶ್ಚಿಮ ಬಂಗಾಳ, ರಾಜಸ್ಥಾನಗಳಲ್ಲಿ ಜನ ಈ ವಾದವನ್ನು ತಿರಸ್ಕರಿಸಿ ತೋರಿಸಿದ್ದಾರೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳು ಹಲವು ದಶಕಗಳಿಂದ ಗ್ರಾಮೀಣ ಭಾಗದಲ್ಲಿ ತಳ ಊರಿರುವ ಪಕ್ಷಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮೊದಲಿನಿಂದಲೂ ಇವು ಬಲಿಷ್ಠ ನೆಲೆ ಹೊಂದಿದ್ದವು. ಬಿಜೆಪಿಯನ್ನು ಪಟ್ಟಣ ಪ್ರದೇಶಕ್ಕೆ ಸೀಮಿತವಾದ ಪಕ್ಷವೆಂದೇ ಗುರುತಿಸಲಾಗುತ್ತಿತ್ತು. ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಪಟ್ಟಣ ಪ್ರದೇಶದ ಜನರೂ ಮತ ಹಾಕಿರುವುದರಿಂದ ಬಿಜೆಪಿ ರಾಜ್ಯದಲ್ಲಿ ಗೆದ್ದಿದೆ ಎಂದು ವಾದಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಕೇವಲ ಗ್ರಾಮೀಣ ಪ್ರದೇಶದಲ್ಲಿ ನಡೆದ ಈ ಚುನಾವಣಾ ಫಲಿತಾಂಶ ಬಿಜೆಪಿಯ ಮಟ್ಟಿಗೆ ಅಪೂರ್ವವೆಂದೇ ಹೇಳಬೇಕು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಜನಪರ ಆಡಳಿತದ ಜೊತೆಗೆ ಕಳೆದ ಕೆಲವು ವರ್ಷಗಳಲ್ಲಿ ತಳಮಟ್ಟದಲ್ಲಿ ಬಿಜೆಪಿಯ ಸಂಘಟನೆ ಬಲಗೊಂಡಿರುವುದೂ ಇದಕ್ಕೆ ಪೂರಕವಾಗಿದೆ. ನಗರವಾಸಿ ವರ್ತಕರ ಪಕ್ಷವೆಂದು ಒಂದು ಕಾಲದಲ್ಲಿ ವಿರೋಧಿಗಳಿಂದ ಅಪಪ್ರಚಾರಕ್ಕೊಳಗಾಗಿದ್ದ ಪಕ್ಷವೊಂದು, ಜನಪರ, ರೈತಪರ, ದೀನದಲಿತರ ಪರ ಎಂದು ಜನಮನ್ನಣೆ ಪಡೆಯುವಲ್ಲಿ ಅಪಾರ ಕಾರ್ಯಕರ್ತರ ಪರಿಶ್ರಮವಿದೆ. ಅವಿರತ ಹೋರಾಟಗಳ ಹಿನ್ನೆಲೆಯಿದೆ. ಸಂಘಟನಾ ಕೌಶಲ್ಯದ ಮೆರುಗಿದೆ. ಕ್ರಿಯಾಶೀಲ ಮನಸ್ಸುಗಳ ಸಮನ್ವಯತೆಯಿದೆ.

ಫಲಿತಾಂಶಗಳಿಂದ ಹಿಗ್ಗಿ ಕೂರುವ ಕಾಲವಿದಲ್ಲ. ಯಾವ ಭಾಗದಲ್ಲಿ ನಮ್ಮ ನ್ಯೂನತೆಗಳಿವೆಯೊ ಅವನ್ನು ಸರಿಪಡಿಸಿಕೊಳ್ಳಬೇಕಿದೆ. ಸೋತಿರುವ ಪ್ರದೇಶಗಳಲ್ಲಿ ನಮ್ಮ ಜವಾಬ್ದಾರಿ ಇನ್ನಷ್ಟು ಹೆಚ್ಚಿದೆ. ಜೊತೆಗೆ ಅಧಿಕಾರ ಹೊಂದಿರುವ ಜಿಲ್ಲೆಗಳಲ್ಲಿ ಅನೇಕ ಸಮಸ್ಯೆಗಳಿವೆ. ಇವೆಲ್ಲಕ್ಕೂ ತಕ್ಷಣ ಪರಿಹಾರ ಕಂಡುಕೊಳ್ಳುವುದು ಅವಶ್ಯಕ.

ಗೆಲುವು ಸಹಜವಾಗಿ ಜವಾಬ್ದಾರಿಯನ್ನು ಹೊರಿಸುತ್ತದೆ. ಜಿ.ಪಂ., ತಾ.ಪಂ.ಗಳಲ್ಲಿನ ಅಸಮರ್ಪಕ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸುವ ಹೊಣೆ ನಮ್ಮ ಮೇಲಿದೆ. ಸವಲತ್ತುಗಳು ಜನತೆಗೆ ತಲುಪಿದಾಗಲೇ ಅಧಿಕಾರದ ವಿಕೇಂದ್ರೀಕರಣ ಅರ್ಥಪಡೆಯಲು ಸಾಧ್ಯ. ಕೃಷಿ, ಕುಡಿಯುವ ನೀರು, ರಸ್ತೆ, ಆರೋಗ್ಯ, ಶಿಕ್ಷಣಗಳ ಬಗ್ಗೆ ವಿಶೇಷ ಗಮನ ಹರಿಸಬೇಕಾಗಿದೆ. ಜಡ್ಡುಗಟ್ಟಿದ ಜಿಲ್ಲಾಡಳಿತಗಳಿಗೆ ಹೊಸ ಚೈತನ್ಯ ತುಂಬಬೇಕಿದೆ.

ಪ್ರತಿಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ಈ ಫಲಿತಾಂಶದಿಂದ ಈಗಲಾದರೂ ಪಾಠ ಕಲಿತು ಸರ್ಕಾರದ ವಿರುದ್ಧ ಅನಗತ್ಯ ಟೀಕೆ ಮಾಡುತ್ತಾ ಸರ್ಕಾರ ಉರುಳಿಸುವ ಷಡ್ಯಂತ್ರಗಳನ್ನು ಕೈಬಿಡುವುದು ಒಳ್ಳೆಯದು. ಇವೆಲ್ಲ ಅಪಪ್ರಚಾರಗಳನ್ನೂ ನಿವಾಳಿಸಿ ಬಿಡುವ ರೀತಿಯ ಫಲಿತಾಂಶದಿಂದಾಗಿ ಬಿಜೆಪಿ ಅಥವಾ ಮುಖ್ಯಮಂತ್ರಿಗಳ ಸಾಮರ್ಥ್ಯ ಕುಗ್ಗಿಲ್ಲ ಎಂದು ಗ್ರಾಮಾಂತರ ಪ್ರದೇಶ ದೃಢೀಕರಣ ಪತ್ರ ನೀಡಿದಂತಾಗಿದೆ. ಈಗಿನ ಫಲಿತಾಂಶ ಭವಿಷ್ಯದ ದಿನಗಳಲ್ಲಿ ಆಡಳಿತ ಯಂತ್ರಕ್ಕೆ ಹೊಸ ಸ್ಫೂರ್ತಿ ಒದಗಿಸಲಿ ಎಂಬುದೇ ಎಲ್ಲರ ಆಶಯ.

ಇಂತಿ ನಿಮ್ಮವ,

ಭಾನುಪ್ರಕಾಶ್

(ಎಂ.ಬಿ.ಭಾನುಪ್ರಕಾಶ್)

## ಒಳಪುಟಗಳಲ್ಲಿ..........


ಹಿಂದೂ ಸಮಾಜೋತ್ಸವ.............4

ಬಿಜೆಪಿ ದಿಗ್ವಿಜಯ.......................7

ಚುನಾವಣಾ ಫಲಿತಾಂಶ.............9

ರಾಷ್ಟ್ರೀಯ ಕಾರ್ಯಕಾರಿಣಿ.........17



**Declaration in**
**Form No. IV**

| | |
|---|---|
| Name of the Magazine | : Dhyeya Kamala |
| Periodicity | : Monthly |
| Language | : Kannada |
| Name of the Publisher, Printer & Owner | : Sri S. Suresh Kumar<br>Sri Bhavoo Rao Deshpande - Smaraka Bhavana,<br>No. 1/1, 8th Main,<br>6th Cross, Malleshwaram,<br>Bangalore 560003. |
| Printing Press | : Rastrothana Mudranalaya,<br>Keshavashilpa,<br>Kempegowdanagar,<br>Bangalore 560019. |
| Name of the Editor | : Sri M.B. Bhanuprakash |


# ಜನಮನ ಸೆಳೆದ ಹಿಂದೂ ಸಮಾಜೋತ್ಸವ

ಮಲ್ಲೇಶ್ವರಂ: ದುಷ್ಟ ಶಕ್ತಿಗಳನ್ನು ನಿಗ್ರಹಿಸಲು ಹಿಂದೂಗಳಲ್ಲಿ ಹನುಮಂತನ ಶಕ್ತಿಯ ಆವಾಹನೆಯಾಗಬೇಕಿದೆ ಎಂದು ಆರೆಸ್ಸೆಸ್‌ನ ಹಿರಿಯ ಪ್ರಚಾರಕ ಶ್ರೀ ಸು. ರಾಮಣ್ಣ ಆಶಿಸಿದರು.

ಹನುಮತ್ ಶಕ್ತಿ ಜಾಗರಣ ಸಮಿತಿವತಿಯಿಂದ ಬೆಂಗಳೂರು ನಗರದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಆಯೋಜಿಸಿದ್ದ ಬೃಹತ್ ಹಿಂದೂ ಸಮಾಜೋತ್ಸವದಲ್ಲಿ ಪಾಲ್ಗೊಂಡು ಅವರು ಮುಖ್ಯ ಭಾಷಣ ಮಾಡಿದರು. ಆಂದೋಲನದ ರೂಪದಲ್ಲಿ ಹಿಂದೂ ಸಮಾಜೋತ್ಸವ ಸದಾಕಾಲ ನಡೆಯಬೇಕಿದೆ ಎಂದ ಅವರು, ದುಷ್ಟರನ್ನು ಆಹುತಿ ಹಾಕಲು ಹಿಂದೂ ಸಮಾಜ ಸಿದ್ಧವಾಗಬೇಕಿದೆ. ಈ ಮೂಲಕ ದುಷ್ಟರ ನಿಗ್ರಹ ಹಾಗೂ ಒಳ್ಳೆ ಸಂಗತಿಗಳ ಅನುಗ್ರಹವಾಗಲಿ ಎಂದು ಅವರು ಕರೆ ನೀಡಿದರು.

ಮೂರು ರಾಷ್ಟ್ರೀಯ ಪ್ರಶ್ನೆಗಳಿಗೆ ಶಾಶ್ವತ ಉತ್ತರ ದೊರಕಬೇಕಿದೆ ಎಂದು ಆಗ್ರಹಿಸಿದ ಅವರು, ರಾಷ್ಟ್ರೀಯ ತೀರ್ಥಕ್ಷೇತ್ರವಾದ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಬೇಕು. ಜಾತ್ಯತೀತರಿಂದ ನಡೆಯುತ್ತಿರುವ ಹಿಂದೂ ಯತಿವರ್ಯರ ಅಪಮಾನ ತಪ್ಪಬೇಕು ಹಾಗೂ ಹಿಂದೂ ಸಮಾಜವನ್ನು, ಅಪಮಾನಿಸಲು ಹುಟ್ಟು ಹಾಕಲಾಗಿರುವ ಕೇಸರಿ ಭಯೋತ್ಪಾದನೆ ಎಂಬ ಪದವನ್ನು ಅಳಿಸಬೇಕು ಎಂದು ಆಗ್ರಹಿಸಿದರು. ಹಿಂದೂ ಬಿದ್ದರೆ ಕುಂಭಕರ್ಣನಂತೆ, ಎದ್ದರೆ ಆಂಜನೇಯನಂತೆ ಎಂದು ವಿಶ್ಲೇಷಿಸಿದ ಶ್ರೀ ರಾಮಣ್ಣ ಅವರು, ಮಲಗಿರುವವರನ್ನು ಎಬ್ಬಿಸುವ ಜವಾಬ್ದಾರಿ ಎದ್ದಿರುವ ಹಿಂದೂಗಳದ್ದಾಗಿದೆ ಎಂದು ಅವರು ಕಿವಿಮಾತು ಹೇಳಿದರು.

ಕೇಸರಿ ಭಯೋತ್ಪಾದನೆ ಎಂಬ ಹೇಳಿಕೆ ವಿರುದ್ಧ ನ.11ರಂದು ದೇಶವ್ಯಾಪಿ ನಡೆದ ಪ್ರತಿಭಟನೆಯಿಂದ ಆರೆಸ್ಸೆಸ್‌ನ ಶಕ್ತಿ ಕೇಂದ್ರಕ್ಕೆ ಪರಿಚಯವಾಗಿದೆ. ಹೀಗಾಗಿ ಕೇಂದ್ರ ಸರ್ಕಾರ ತೆಪ್ಪಗಾಗಿದೆ ಎಂದು ಅವರು ಛೇಡಿಸಿದರು. ಪುತ್ತಿಗೆ ಮಠಾಧೀಶ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಶಿವಗಂಗೆ ಮೇಲಣ ಗವಿ ಮಠದ ಶ್ರೀಶಾಂತಮುನಿ ಸ್ವಾಮೀಜಿ, ಜ್ಞಾನೇಂದ್ರ ಮಠದ ಶ್ರೀನಾರಾಯಣಾನಂದ ಸರಸ್ವತಿ ಸ್ವಾಮೀಜಿ, ಹೊಸಕೋಟೆ ಶಂಕರ ಮಠದ ಶ್ರೀಪದ್ಮಪಾದಾಚಾರ್ಯ, ಗೀತಾ ಮಂದಿರದ ಶ್ರೀರಮಣಾನಂದ ಸ್ವಾಮೀಜಿ, ಸರ್ಪಭೂಷಣ ಮಠದ ಶ್ರೀಮಲ್ಲಿಕಾರ್ಜುನ ದೇವರು, ಓಂಕಾರ ಆಶ್ರಮದ ಶ್ರೀಮಧುಸೂದನಾಂದಪುರಿ ಸ್ವಾಮೀಜಿ ಹಾಗೂ ಶ್ರೀ ರಂಗನಾಥ ಗೌಡಿಯ ಮಠದ ಶ್ರೀ ಪಾದ ಭಕ್ತ ವೇದಾಂತ ದಂಡಿ ಮಹಾರಾಜ ಮೊದಲಾದವರು ಸಮಾಜೋತ್ಸವದಲ್ಲಿ ಉಪಸ್ಥಿತರಿದ್ದರು.

## ಹಿಂದೂ ಸಮಾಜವನ್ನು ಕೆಣಕಬೇಡಿ

ಹೆಬ್ಬಾವಿನಂತೆ ಮಲಗಿರುವ ಹಿಂದೂ ಸಮಾಜ ಎದ್ದು ಬುಸುಗುಟ್ಟಿದರೂ ಸಾಕು, ಸಮಸ್ಯೆಗಳು ತಾನೇ ತಾನಾಗಿ ಪಲಾಯನ ಮಾಡುತ್ತವೆ ಎಂದು ಪುತ್ತಿಗೆ ಮಠಾಧೀಶ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ರೋಗಾಣುವಿನಿಂದ ಮನುಷ್ಯನಿಗೆ ರೋಗ ಬರುವುದಿಲ್ಲ.

ಪ್ರತಿರೋಧ ಶಕ್ತಿ ಕಳೆದುಕೊಂಡಾಗ ಮಾತ್ರ ರೋಗ ಬರುತ್ತದೆ. ಅಂತೆಯೇ ಹಿಂದು ಸಮಾಜ ಪ್ರತಿರೋಧ ಶಕ್ತಿ ಕಳೆದುಕೊಂಡಿರುವುದರಿಂದ ಅನ್ಯಾಯ, ಅನಿಷ್ಟಗಳು ಎದುರಾಗಿವೆ. ಇದಕ್ಕೆ ಬೇರೆ ಸಮಾಜವನ್ನು ದೂಷಿಸಿ ಪ್ರಯೋಜನವಿಲ್ಲ. ಹಿಂದುಗಳು ಜಾಗೃತರಾಗುವುದೇ ಇದಕ್ಕೆಲ್ಲ ಪರಿಹಾರ ಎಂದು ಅವರು ಹೇಳಿದರು.

## ಹಿಂದು ವಿರೋಧಿಗಳನ್ನು ಸೋಲಿಸಿ

ಮತದಾನದ ಮೂಲಕವೇ ಹಿಂದು ವಿರೋಧಿಗಳಿಗೆ ಗೇಟ್‌ಪಾಸ್ ನೀಡಬೇಕಿದೆ ಎಂದು ಶಿವಗಂಗೆ ಮೇಲಣ ಗವಿಮಠದ ಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ಮಹಾ ಸ್ವಾಮೀಜಿ ಕರೆ ನೀಡಿದರು.

ಶತಮಾನಗಳ ಇತಿಹಾಸವುಳ್ಳ ಹಿಂದು ಸಮಾಜ ಹಣ, ಅಧಿಕಾರ ಬಲದಿಂದ ಉಳಿದಿಲ್ಲ. ಜನರ ಶ್ರದ್ಧೆಯಿಂದ ಉಳಿದಿದೆ ಎಂದರು. ಹಿಂದುಗಳೆಂದು ಇನ್ನೊಬ್ಬರ ನೆಲ-ಜಲ ಕಸಿದುಕೊಳ್ಳಲು ಹೋರಾಟ ನಡೆಸಿಲ್ಲ. ಬದಲಿಗೆ ನಮ್ಮ ನೆಲ-ಜಲ ಉಳಿಸಿಕೊಳ್ಳಲು ಸ್ವಾಭಿಮಾನದಿಂದ ಹೋರಾಡಿದ್ದೇವೆ ಎಂದು ಅವರು ಹೇಳಿದರು.

ಸರ್ಪಭೂಷಣ ಮಠದ ಮಲ್ಲಿಕಾರ್ಜುನ ದೇವರು ಮಾತನಾಡಿ, ವೈಚಾರಿಕತೆಯ ನೆಲೆಗಟ್ಟಿನಲ್ಲಿ ಹಿಂದು ಹಬ್ಬ-ಹರಿದಿನಗಳನ್ನು ವಿರೋಧಿಸುವವರಿಂದ ಸಂಸ್ಕೃತಿ ಹಾಳಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

**ಜಯನಗರ:** ಹಿಂದು ರಾಷ್ಟ್ರದಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಕಾನೂನಿನ ಅಪ್ಪಣೆಗಾಗಿ ಕಾಯುವ ಸ್ಥಿತಿ ಎದುರಾಗಿರುವುದು ದುರಂತ ಎಂದು ಮಾದಿಗ ದಂಡೋರ ರಾಜ್ಯಾಧ್ಯಕ್ಷ ಶ್ರೀ ಎಂ. ಶಂಕರಪ್ಪ ಅಭಿಪ್ರಾಯಪಟ್ಟರು.

ರಾಮ ಹುಟ್ಟಿದ ನೆಲದಲ್ಲಿ ಮಂದಿರ ಕಟ್ಟಲಾಗದ ಅಸಹಾಯಕತೆ ನಮ್ಮದು. ಭವಿಷ್ಯದಲ್ಲಿ ನಮಗೊಂದು ಮನೆ ಕಟ್ಟಿಕೊಳ್ಳಲು ಸಾಧ್ಯವೇ? ಆಸ್ತಿ ಮಾಡಿಟ್ಟು ಹೋಗಲು ಸಾಧ್ಯವೇ? ಎಂದು ಹನುಮಾನ್ ಶಕ್ತಿ ಜಾಗರಣ ಸಮಿತಿ ಬೆಂಗಳೂರು ನಗರದ ಜಯನಗರದಲ್ಲಿ ಹಮ್ಮಿಕೊಂಡಿದ್ದ ಹಿಂದು ಸಮಾಜೋತ್ಸವದಲ್ಲಿ ಅವರು ಪ್ರಶ್ನಿಸಿದರು.

ಆರ್.ಎಸ್.ಎಸ್. ಪ್ರಮುಖ ಡಾ. ಪ್ರಭಾಕರ್ ಭಟ್ ಮಾತನಾಡಿ, ಗಾಂಧಿ ಕುಟುಂಬದಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿದೆ ಎನ್ನುವ ಅಭಿಪ್ರಾಯ ತಪ್ಪು. ಶ್ರೀ ರಾಹುಲ್ ಗಾಂಧಿ ಹಿಂದು ಸಂಘಟನೆಯನ್ನು ಸಿಮಿ ಹಾಗೂ ಲಷ್ಕರೆ ತೊಯ್ಬಾಕ್ಕೆ ಹೋಲಿಸಿರುವುದು ಸರಿಯಲ್ಲ ಎಂದರು. ರಾಮಕೃಷ್ಣ ಆಶ್ರಮದ ಶ್ರೀ ನಿರ್ಭಯಾನಂದ ಸ್ವಾಮೀಜಿ, ಕೊಳದ ಮಠದ ಡಾ. ಶಾಂತವೀರ ಸ್ವಾಮೀಜಿ ಸೇರಿದಂತೆ ನಾನಾ ಮಠಗಳ ಮಠಾಧೀಶರು ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು.

**ನೆಲಮಂಗಲ:** ದೇಶದ ಮೂಲೆ ಮೂಲೆಗಳಲ್ಲಿ ನೆಲೆಸಿರುವ ಹಿಂದೂಗಳು ಸಂಘಟಿತರಾಗಿ, ಜಾತಿ, ಮತ, ಪಂಥಗಳ ಸಂಪ್ರದಾಯಗಳನ್ನು ಮರೆತು ನಾವೆಲ್ಲ ಭಾರತೀಯರು ಒಂದೇ ತಾಯಿಯ ಮಕ್ಕಳು ಎನ್ನುವ ಭಾವನೆಯನ್ನು ಮೂಡಿಸುವುದೇ ಹಿಂದೂ ಸಮಾವೇಶದ ಉದ್ದೇಶ ಎಂದು ದಕ್ಷಿಣ ಭಾರತ ಪ್ರಾಂತ ಪ್ರಮುಖ ಶ್ರೀ ಮುನಿಯಪ್ಪ ತಿಳಿಸಿದರು.

ಸ್ಥಳೀಯ ಹನುಮಾನ್ ಶಕ್ತಿ ಜಾಗರಣಾ ಸಮಿತಿ ವತಿಯಿಂದ ಬಸವಣ್ಣ ದೇವರ ಮಠದಲ್ಲಿ ಏರ್ಪಡಿಸಿದ್ದ ಬೃಹತ್ ಹಿಂದೂ ಸಮಾವೇಶದ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ದೇಶಭಕ್ತಿಯ ಸಂಸ್ಕಾರ ನೀಡುವ ಸಾಮಾಜಿಕ ಪರಿವರ್ತನೆ ತರುವ ಕಾರ್ಯವನ್ನು ಸಂಘಟನೆ ಮಾಡುತ್ತಿದೆ ಎಂದರು.

ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಶ್ರೀ ರಾಮಪ್ಪ, ದಕ್ಷಿಣ ಪ್ರಾಂತ ಸಮಿತಿಯ ಅಧ್ಯಕ್ಷ ಶ್ರೀ ವಾಸುದೇವ ಮೂರ್ತಿ, ಸಂಚಾಲಕ ಶ್ರೀ ಬಿದಲೂರು ಸೋಮಣ್ಣ ಉತ್ಸವವನ್ನು ಉದ್ದೇಶಿಸಿ ಮಾತನಾಡಿದರು.

### ಉದ್ಯಾನ ನಗರದಲ್ಲಿ ಕೇಸರಿ ಅಬ್ಬರ

ಮುಗಿಲು ಮುಟ್ಟಿದ ಘೋಷಣೆ... ಹಾರಾಡಿದ ಭಗವಾಧ್ವಜ... ಶಿಸ್ತು ಬದ್ಧವಾಗಿ ಹರಿದು ಬಂದ ಕೇಸರಿ ಪಡೆ... ಇವು ಬೆಂಗಳೂರು ನಗರದ ಮಲ್ಲೇಶ್ವರಂನ ಹಿಂದು ಸಮಾಜೋತ್ಸವದಲ್ಲಿ ಕಂಡು ಬಂದ ದೃಶ್ಯಾವಳಿ.

ಹನುಮತ್ ಶಕ್ತಿ ಜಾಗರಣ ಸಮಿತಿವತಿಯಿಂದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಆಯೋಜಿಸಿದ್ದ ಬೃಹತ್ ಹಿಂದು ಸಮಾಜೋತ್ಸವದ ಹಿನ್ನೆಲೆಯಲ್ಲಿ ಶೇಷಾದ್ರಿಪುರಂನ ಜಕ್ಕರಾಯನ ಕೆರೆ ಆಟದ ಮೈದಾನದಿಂದ ಹಕ್ಕ-ಬುಕ್ಕ ಹಾಗೂ ಮಲ್ಲೇಶ್ವರಂನ 18ನೇ ಕ್ರಾಸ್ ಆಟದ ಮೈದಾನದಿಂದ ಹೊರಟ ಬುದ್ಧ-ಬಸವ ಶೋಭಾ ಯಾತ್ರೆಯಲ್ಲಿ ಪಾಲ್ಗೊಂಡ ಸಹಸ್ರಾರು ಹಿಂದುಗಳು ಎಲ್ಲಿಯೂ ಶಿಸ್ತು ಮೀರಲಿಲ್ಲ.

ಹೀಗಾಗಿ ಸದಾ ಜನಜಂಗುಳಿಯಿಂದ ಕೂಡಿರುವ ಮಲ್ಲೇಶ್ವರಂನ ಸಂಪಿಗೆ ರಸ್ತೆ ಸೇರಿದಂತೆ ಆಸುಪಾಸಿನ ರಸ್ತೆಗಳಲ್ಲಿ ಸಂಚಾರ ವ್ಯವಸ್ಥೆ ಹದಗೆಡದಿದ್ದುದು ಇಂದಿನ ವಿಶೇಷ. ಮಾತ್ರವಲ್ಲದೆ ಶಿಸ್ತು ಬದ್ಧತೆಯನ್ನು ಶೋಭಾಯಾತ್ರೆ ಮೂಲಕ ಜನರಿಗೆ ಪರಿಚಯಿಸಲಾಯಿತು.

ವಂದೇ ಮಾತರಂ, ಭಾರತ್ ಮಾತಾಕೀ ಜೈ, ನಾವೆಲ್ಲ ಒಂದು-ನಾವೆಲ್ಲ ಹಿಂದು ಮೊದಲಾದ ಘೋಷಣೆಗಳು ಶೋಭಾಯಾತ್ರೆ ವೇಳೆ ಮುಗಿಲು ಮುಟ್ಟಿದವು. ತಲೆಗೆ ಕೇಸರಿ ಪಟ್ಟಿ ಪೇಟ ಧರಿಸಿ, ಕೈಯಲ್ಲಿ ಕೇಸರಿ ಧ್ವಜ ಹಿಡಿದಿದ್ದ ಸಹಸ್ರಾರು ಮಂದಿ ಮಹಿಳೆಯರು, ಮಕ್ಕಳೆನ್ನದೆ ಶೋಭಾಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಮಲ್ಲೇಶ್ವರಂ ಆಟದ ಮೈದಾನದಲ್ಲಿ ಶ್ರೀ ಹನುಮತ್ ಶಕ್ತಿ ಜಾಗರಣ ಯಜ್ಞ, ಪೂರ್ಣಾಹುತಿ ಬಳಿಕ ಪ್ರಸಾದ ವಿನಿಯೋಗ ನಡೆಯಿತು.

ಸಹಸ್ರಾರು ಹಿಂದುಗಳು ಸೇರಿದ್ದ ಸಮಾಜೋತ್ಸವದಲ್ಲಿ ಉಳಿಸಲು ಬನ್ನಿ ದೇಶದ ಗಡಿ-ಕಟ್ಟಲು ಬನ್ನಿ ರಾಮನ ಗುಡಿ ಎಂಬ ಶೀರ್ಷಿಕೆಯ ವೇದಿಕೆಯಿಂದ ಹಲವಾರು ಸ್ವಾಮೀಜಿಗಳು, ಆರೆಸ್ಸೆಸ್‌ನ ಹಿರಿಯ ಪ್ರಚಾರಕ ಸು.ರಾಮಣ್ಣ ಮಾರ್ಗದರ್ಶನ ಮಾಡಿದರು. ಓಂಕಾರ ಆಶ್ರಮದ ಶ್ರೀ ಮಧುಸೂದನಾನಂದ ಸ್ವಾಮೀಜಿ ಸಂಕಲ್ಪ ಬೋಧನೆ ಮಾಡಿದರು.

ಶಿವಗಂಗೆಯ ಮೇಲಣಗವಿ ಮಠದ ಶ್ರೀ ಮಲಯ ಶಾಂತಮುನಿ ದೇಶಿ ಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶೋಭಾಯಾತ್ರೆಯನ್ನು ನಡೆಸಲಾಯಿತು.

ಶ್ರೀ ರಂಗಹನುಮಯ್ಯ, ಶ್ರೀ ಜಿ. ಮರಿಸ್ವಾಮಿ, ಶ್ರೀ ಕೇಬಲ್ ಸುರೇಶ್, ಶ್ರೀ ಗಂಗಾಧರ್, ಶ್ರೀ ಎಸ್. ಮಲ್ಲಯ್ಯ, ಶ್ರೀ ಸುಬ್ಬಣ್ಣ, ಶ್ರೀ ಚಂದ್ರಶೇಖರ್ ಮತ್ತಿತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ರಾಮ ಮಂದಿರ ನಿರ್ಮಾಣ ಶತಸಿದ್ಧ: ಶ್ರೀ ತೊಗಾಡಿಯಾ

ಜಿಹಾದಿ ಮಾನಸಿಕತೆಯನ್ನು ದಮನ ಮಾಡುವ ಮೂಲಕ ರಾಮಜನ್ಮ ಭೂಮಿಯಾದ ಅಯೋಧ್ಯೆಯಲ್ಲಿ ರಾಮ ಮಂದಿರವನ್ನು ನಿರ್ಮಿಸಿಯೇ ಸಿದ್ಧ, ಅಲ್ಲಿ ಭವ್ಯ ಮಂದಿರವು ಶೀಘ್ರವೇ



ನಿರ್ಮಾಣವಾಗಲಿದೆ ಎಂಬುದಾಗಿ ವಿಶ್ವ ಹಿಂದು ಪರಿಷತ್‌ನ ಅಂತಾರಾಷ್ಟ್ರೀಯ ಮಹಾ ಕಾರ್ಯದರ್ಶಿ ಡಾ.ಪ್ರವೀಣ್ ಭಾಯ್ ತೊಗಾಡಿಯಾ ಘೋಷಿಸಿದ್ದಾರೆ.

ಮಂಗಳೂರಿನಲ್ಲಿ ನಡೆದ ಹಿಂದೂ ಸಮಾಜೋತ್ಸವದಲ್ಲಿ ಲಕ್ಷಾಂತರ ಜನರನ್ನುದ್ದೇಶಿಸಿ ಪ್ರಧಾನ ಭಾಷಣ ಮಾಡಿದ ಡಾ.ಪ್ರವೀಣ್ ಭಾಯ್ ತೊಗಾಡಿಯಾ, ಅಯೋಧ್ಯೆಯ 67 ಎಕರೆ ಭೂಮಿಯಲ್ಲಿ ಮಂದಿರವಾಗದೆ ಮಸೀದಿ ಆಗಲಿದೆಯೇ? ಬಾಬರ್ ಅಲ್ಲ, ಆತನ ವಂಶಸ್ಥರು ಯಾರೇ ಬಂದರೂ ಮಂದಿರ ನಿರ್ಮಾಣವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಬೇಕಾದಲ್ಲಿ ಮಕ್ಕಾದಲ್ಲೂ ರಾಮ ಮಂದಿರ ನಿರ್ಮಿಸುವಂತಹ ಅದಮ್ಯ ಶಕ್ತಿಯನ್ನು ಹಿಂದು ಸಮಾಜ ಹೊಂದಿದೆ ಎಂದು ನುಡಿದು, ರಾಮಮಂದಿರ ನಿರ್ಮಾಣಕ್ಕೆ ಎದುರಾಗುವ ವಿರೋಧವನ್ನು ಸಹಿಸುವುದಿಲ್ಲ ಎಂಬ ಎಚ್ಚರಿಕೆ ನೀಡಿದರು.

ಹಿಂದೆ ಒಬ್ಬ ಜಿನ್ನಾ ಇದ್ದ. ಒಂದು ಮುಸ್ಲಿಂ ಲೀಗ್ ಇತ್ತು. ಈಗ ಹತ್ತಾರು ಮಂದಿಯ ಮೇಲೆ ಜಿನ್ನಾನ ಭೂತ ಸವಾರಿಯಾಗಿದೆ. ಅವರ ನೇತೃತ್ವದಲ್ಲಿ ಹತ್ತಾರು ಲೀಗ್‌ಗಳು ಕಾರ್ಯಪ್ರವೃತ್ತಿವಾಗಿವೆ. ಕಾಶ್ಮೀರವನ್ನು ಮತ್ತೊಂದು ಪಾಕಿಸ್ಥಾನ ಮಾಡುವ ತಂತ್ರ ನಡೆಯುತ್ತಿದೆ. ಇದಕ್ಕೆ ಆಸ್ಪದ ನೀಡಲಾರೆವು. ಪಾಕಿಸ್ಥಾನದ ಬಗ್ಗೆ ಒಲವು ಹೊಂದಿರುವಂತೆ ಮಾತನಾಡುತ್ತಿರುವ ರಾಹುಲ್ ಗಾಂಧಿ ಹಿಂದುಗಳದು ಕೇಸರಿ ಭಯೋತ್ಪಾದನೆ ಎಂಬ ನೆಲೆಯಲ್ಲಿ ಮಾತನಾಡುತ್ತಿದ್ದಾರೆ. ಅವರಿಗೆ ಇಲ್ಲಿ ಬದುಕಲು ಭಯವಿದ್ದಲ್ಲಿ ಪಾಕಿಸ್ಥಾನ ಅಥವಾ ಇಟೆಲಿಯಲ್ಲಿ ಹೋಗಿ ನೆಲೆಸಲಿ. ಅವರ ಮೈಮೇಲೂ ಜಿನ್ನಾ ಭೂತ ಕುಣಿಯುತ್ತಿರುವಂತಿದೆ ಎಂದು ಶ್ರೀ ತೊಗಡಿಯಾ ಕಟುವಾಗಿ ಟೀಕಿಸಿದರು.

### ಮಂದಿರಕ್ಕೆ ಭಿಕ್ಷೆ ಬೇಕಿಲ್ಲ

ರಾಮ ಮಂದಿರವನ್ನು ಯಾರೂ ಭಿಕ್ಷೆಯಾಗಿ ಕೊಡಬೇಕಾಗಿಲ್ಲ.ಸಂಧಾನದಿಂದಲೂ ಬೇಡ. ನಮ್ಮ ಸ್ವಂತ ಶಕ್ತಿಯ ಆಧಾರದಲ್ಲೇ ನಾವದನ್ನು ಪಡೆದುಕೊಳ್ಳುತ್ತೇವೆ. ಶತ ಶತಮಾನಗಳ ಹಿಂದೆ ಆದಂತಹ ಅಪಮಾನದ ಕಳಂಕವನ್ನು ತೊಡೆದು ಹಾಕುತ್ತೇವೆ ಎಂದು ನುಡಿದ ಶ್ರೀ ತೊಗಾಡಿಯಾ, ರಾಮ ಮಂದಿರ ನಿರ್ಮಾಣ ಪ್ರಮುಖ ಅಂಶವಾಗಿದ್ದರೂ ಇದರ ಪರೋಕ್ಷ ಪರಿಣಾಮ ನಮ್ಮ ಎಲ್ಲಾ ಶ್ರದ್ಧಾ ಕೇಂದ್ರಗಳ ರಕ್ಷಣೆಯಾಗಿದೆ ಹಾಗೂ ಅವನ್ನು ಉಳಿಸಿಕೊಳ್ಳಲು ಪ್ರೇರಕವಾಗಲಿದೆ ಎಂದು ನುಡಿದರು. ●

## ಬೆಂಗಳೂರಿನಲ್ಲಿ ಎಬಿವಿಪಿ 56ನೇ ರಾಷ್ಟ್ರೀಯ ಸಮ್ಮೇಳನ

ವಿದ್ಯಾರ್ಥಿ ವೃಂದದಲ್ಲಿ ದೇಶಪ್ರೇಮದ ಪ್ರಖರ ತೇಜಸ್ಸನ್ನು ಹೊರಸೂಸಿದ ಎಬಿವಿಪಿ 56ನೇ ರಾಷ್ಟ್ರೀಯ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ದೇಶದ ಏಕತೆಯನ್ನು ಸಾರುವ ವಂದೇ ಮಾತರಂ ಗೀತೆಯೊಂದಿಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಧ್ವಜಾರೋಹಣವಾಯಿತು. ವಿವಿಧ ರಾಜ್ಯಗಳಿಂದ ಬಂದಿದ್ದ ಸುಮಾರು 800 ವಿದ್ಯಾರ್ಥಿಗಳು ಒಂದೇ ವೇದಿಕೆಯಲ್ಲಿ ಏಕ ಕಾಲಕ್ಕೆ ವಂದೇ ಮಾತರಂ ಗೀತೆ ಹಾಡಿದರು. ಎಬಿವಿಪಿ ರಾಷ್ಟ್ರೀಯ ಅಧ್ಯಕ್ಷ ಡಾ. ಮಿಲಿಂದ್ ಮರಾಠೆ ಧ್ವಜಾರೋಹಣ ಮಾಡಿದರು.

'ಕೇಂದ್ರ ಸರ್ಕಾರ ಪ್ರಕಟಿಸಿರುವ ಪಠ್ಯಪುಸ್ತಕಗಳಲ್ಲಿ ಭಗತ್‌ಸಿಂಗ್, ಸುಖದೇವ್, ರಾಜ್‌ಗುರು ಮತ್ತಿತರನ್ನು ಭಯೋತ್ಪಾದಕರೆಂದೂ, ಭಯೋತ್ಪಾದಕರನ್ನು ರಾಷ್ಟ್ರಭಕ್ತರೆಂದೂ ಬಿಂಬಿಸುವ ಹುನ್ನಾರಗಳು ನಡೆಯುತ್ತಿವೆ' ಎಂದು ರಾಜ್ಯಸಭಾ ಸದಸ್ಯ ನ್ಯಾಯಮೂರ್ತಿ ಶ್ರೀ ಎಂ. ರಾಮಾಜೋಯಿಸ್ ಈ ಸಂದರ್ಭದಲ್ಲಿ ವಿಷಾದಿಸಿದರು.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾಗಿ, ಕಾಶ್ಮೀರ ನಮ್ಮಿಂದ ದೂರಾದರೆ ಅದು ಅಖಂಡ ಭಾರತವಾಗುವುದಿಲ್ಲ ಎಂದು ಆರ್‌ಎಸ್‌ಎಸ್‌ನ ಸಹ ಸರಕಾರ್ಯವಾಹ ಶ್ರೀ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

ಸಂಸ್ಕೃತಿ, ಧರ್ಮ, ಏಕತೆ ಆಧಾರದ ಮೇಲೆ ಭಾರತವನ್ನು ಕಟ್ಟಬೇಕಿದೆ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಸುನಿಲ್ ಅಂಬೇಕರ್ ಅಭಿಪ್ರಾಯಪಟ್ಟರು. ಬೆಂಗಳೂರಿನ ಈ ಅಧಿವೇಶನ ವಿದ್ಯಾರ್ಥಿ ಸಮೂಹಕ್ಕೆ ಹೊಸ ಸಂದೇಶ ನೀಡುವುದರ ಜೊತೆಗೆ ನವ ಉತ್ಸಾಹವನ್ನು ತುಂಬಿತು. ●

ಸಾಂದರ್ಭಿಕ

# ಪಂಚಾಯಿತಿ ಸಮರದಲ್ಲಿ ಬಿಜೆಪಿ ದಿಗ್ವಿಜಯ

- ಎಸ್. ಶಾಂತಾರಾಮ್

ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಆಡಳಿತ ಬಿಜೆಪಿ ನಿರೀಕ್ಷೆಯಂತೆಯೇ ಮೇಲುಗೈ ಸಾಧಿಸಿದೆ.ವಿರೋಧ ಪಕ್ಷಗಳ ಅತಿಯಾದ ಅಪಪ್ರಚಾರ,ಆರೋಪಗಳ ಹೊರತಾಗಿಯೂ ಬಿಜೆಪಿಗೆ ಮತದಾರರ ಒಲವು ವ್ಯಕ್ತವಾಗಿದೆ. ಬಿಜೆಪಿ ವಿರುದ್ಧ ಹರಿಹಾಯಲು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಿದರೂ, ರಾಜ್ಯದ ಮತದಾರರು ಅಭಿವೃದ್ಧಿಯನ್ನು ಹೊರತುಪಡಿಸಿ ಬೇರಾವುದೇ ವಿಷಯಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎನ್ನುವುದು ಈ ಚುನಾವಣಾ ಫಲಿತಾಂಶದಿಂದ ದೃಢಪಟ್ಟಿದೆ.ಅತಿಯಾದ ಅಪಪ್ರಚಾರದಿಂದ ರಾಜಕೀಯವಾಗಿ ಲಾಭ ಗಳಿಸಬಹುದು ಎನ್ನುವ ವಿಪಕ್ಷಗಳ ಲೆಕ್ಕಾಚಾರ ಈ ಬಾರಿ ತಲೆಕೆಳಗಾಗಿದೆ ಎನ್ನುವುದನ್ನು ಒಪ್ಪಲೇಬೇಕು.

### ಬಿಜೆಪಿ ಮುನ್ನಡೆ

2005ರಲ್ಲಿ ಬಿಜೆಪಿಗೆ ದಕ್ಕಿದ್ದು ಒಂದೇ ಒಂದು ಜಿಲ್ಲಾ ಪಂಚಾಯಿತಿ.ಆದರೆ ಈ ಬಾರಿ 12 ಜಿಲ್ಲಾ ಪಂಚಾಯಿತಿಗಳು ಬಿಜೆಪಿಗೆ ಒಲಿದಿವೆ.ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಮತ ಚಲಾಯಿಸುವವರು ಬಹುತೇಕ ಗ್ರಾಮೀಣ ಮತದಾರರು.ಅವರೆಲ್ಲಾ ಈಗಲೂ ಬಿಜೆಪಿ ಪರವಾಗಿದ್ದಾರೆ ಎನ್ನುವುದು ವಿಪಕ್ಷಗಳ ಪಾಲಿಗಂತೂ ನಿರಾಸೆ ಉಂಟುಮಾಡುವ ವಾಸ್ತವ.ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆ ಆದರೆ , ಸರ್ಕಾರ ಪತನಗೊಳಿಸುವ ತಮ್ಮ ಯತ್ನಕ್ಕೆ ಮತ್ತಷ್ಟು ವೇಗ ಸಿಕ್ಕೀತು ಎಂದು ವಿಪಕ್ಷಗಳು ರೂಪಿಸಿದ ರಣತಂತ್ರಕ್ಕೆ ಭಾರೀ ಹಿನ್ನೆಡೆಯಾಗಿದೆ.ಬಿಜೆಪಿಗೆ ಈ ಫಲಿತಾಂಶವು ಮತ್ತಷ್ಟು ಬಲ ನೀಡಿದೆ.

12 ಜಿಲ್ಲಾ ಪಂಚಾಯಿತಿಗಳಲ್ಲಿ ಬಹುಮತ ಪಡೆಯುವುದರ ಜೊತೆಗೆ 176 ತಾಲೂಕು ಪಂಚಾಯಿತಿಗಳ ಪೈಕಿ 68 ತಾಲೂಕು ಪಂಚಾಯಿತಿಗಳಲ್ಲಿ ಬಿಜೆಪಿಗೆ ನಿಚ್ಚಳ ಬಹುಮತ ಸಿಕ್ಕಿದೆ.ಉಳಿದಂತೆ ಅತಂತ್ರ ಸ್ಥಿತಿ ನಿರ್ಮಾಣವಾಗಿರುವ ಅನೇಕ ತಾಲೂಕು ಪಂಚಾಯಿತಿಗಳಲ್ಲೂ ಬಿಜೆಪಿಗೆ ಅವಕಾಶ ಹೆಚ್ಚಿದೆ. ಅತಂತ್ರ ಸ್ಥಿತಿ ಇರುವ 10 ಜಿಲ್ಲಾ ಪಂಚಾಯಿತಿಗಳಲ್ಲೂ ಕೆಲವು ಕಡೆಗಳಲ್ಲಿ ಬಿಜೆಪಿಗೆ ಅಧಿಕಾರಕ್ಕೇರುವ ಅದೃಷ್ಟವಿದೆ.ಇದೇ ಕಾರಣಕ್ಕೆ ಕಾಂಗ್ರೆಸ್ ಮತ್ತು ಜೆಡಿಎಸ್ ಚುನಾವಣೆಗೆ ಮುನ್ನ ಹೊಡೆದಾಡಿದರೂ ಇದೀಗ ಮೈತ್ರಿ ಮೂಲಕ ಹಿಂಬಾಗಿಲಿಂದ ಅಧಿಕಾರ ಹಿಡಿಯುವ ಸಂಚು ನಡೆಸಿವೆ.

### ಗ್ರಾಮೀಣರ ಆಯ್ಕೆ

ಬಿಜೆಪಿಯನ್ನು ಸೋಲಿಸಿ ಆ ಮೂಲಕ ರಾಜ್ಯ ಸರ್ಕಾರವನ್ನು ದುರ್ಬಲಗೊಳಿಸುವುದು ವಿರೋಧ ಪಕ್ಷಗಳ ಹುನ್ನಾರವಾಗಿತ್ತು.ಆದರೆ ರಾಜ್ಯದ ಮತದಾರರು ಸರ್ಕಾರ ಪತನಗೊಳಿಸುವ ವಿಪಕ್ಷಗಳ ಸಂಚಿಗೆ ತಮ್ಮ ಬೆಂಬಲವಿಲ್ಲ ಎಂದು ಸಾರಿದ್ದಾರೆ.ಗ್ರಾಮೀಣ ಮತದಾರರ ಒಲವನ್ನು ಈಗಲೂ ಉಳಿಸಿಕೊಂಡಿರುವ ಬಿಜೆಪಿಗೆ ಇದು ಅತಿ ಹೆಚ್ಚು ಶಕ್ತಿ ನೀಡುವ ಅಂಶ.ನಗರ ಪ್ರದೇಶಗಳಲ್ಲಿ ಮಾಧ್ಯಮಗಳಲ್ಲಿನ ವರದಿಗಳಿಂದ ಪ್ರಭಾವಿತರಾದ ಕೆಲವರು ಬಿಜೆಪಿ ವಿರುದ್ಧ ಜನಾಭಿಪ್ರಾಯ ಮೂಡಿಸುವ ಯತ್ನ ನಡೆಸಿದ್ದರು.ಆದರೆ ಗ್ರಾಮೀಣ ಮತದಾರರ ಮೇಲೆ ಇಂತಹ ಯಾವುದೇ ವರದಿಗಳೂ ಪ್ರಭಾವ ಬೀರಿಲ್ಲ ಎನ್ನುವುದೂ ಈ ಚುನಾವಣಾ ಫಲಿತಾಂಶ ಹೊರಹಾಕಿರುವ ಮತ್ತೊಂದು ಪ್ರಮುಖ ಸಂಗತಿಯಾಗಿದೆ.

### ವಿಫಲವಾದ ಅಪಪ್ರಚಾರ

ರಾಜ್ಯಾದ್ಯಂತ ನಡೆದಿರುವ ಅಭಿವೃದ್ಧಿ ಕಾರ್ಯಗಳು ಬಿಜೆಪಿಯನ್ನು ಮತದಾರರು ಮರೆಯಲಾಗದಂತೆ ಮಾಡಿದೆ ಎಂದರೆ ಅದು ಉತ್ಪ್ರೇಕ್ಷೆಯಲ್ಲ.ಜಿಲ್ಲೆ ಮತ್ತು ತಾಲೂಕುಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಮತದಾರರು ಕಣ್ಣಾರೆ ಕಂಡಿದ್ದಾರೆ.ಅಂತಹ ಮತದಾರರಿಗೆ ವಿಪಕ್ಷಗಳು ಮಾಧ್ಯಮಗಳ ಮೂಲಕ ಮಾಡಿರುವ ಆರೋಪಗಳನ್ನು ನಂಬುವ ಅಗತ್ಯವೂ ಇಲ್ಲ.ಕೇವಲ ಮಾಧ್ಯಮಗಳ ಮೂಲಕ ಅಪಪ್ರಚಾರ ಮಾಡುವ ವಿರೋಧಿಗಳ ಹೇಳಿಕೆಗಳನ್ನು ಓದುವ ಅಥವಾ ನೋಡುವ ವ್ಯವಧಾನವೂ ಇಲ್ಲ.ಅಭಿವೃದ್ಧಿ ಕಾರ್ಯ ನಡೆಯುತ್ತಿರುವಾಗ ವಿನಾಕಾರಣ ಆರೋಪಗಳ ಆಧಾರದ ಮೇಲೆ ಸರ್ಕಾರ ಬೀಳಿಸುವುದು ಮತದಾರರಿಗೂ ಬೇಕಿಲ್ಲ ಎನ್ನುವುದನ್ನು ಈ ಫಲಿತಾಂಶ ಸಾರಿ ಹೇಳಿದೆ.

ಬಿಜೆಪಿ ಅಂದರೆ , ಶಿಕ್ಷಿತರು, ನಗರ ಪ್ರದೇಶಗಳ ಜನರ ಪಕ್ಷ ಎಂದು ಬಿಂಬಿಸಿ ಅದರ ಲಾಭ ಪಡೆಯುತ್ತಿದ್ದ ವಿರೋಧಿಗಳನ್ನು ಪಂಚಾಯಿತಿ ಫಲಿತಾಂಶ ಬೆಚ್ಚಿ ಬೀಳುವಂತೆ ಮಾಡಿದೆ.ನಗರ ಪ್ರದೇಶಗಳಲ್ಲಿ ತನ್ನ ಜನಪ್ರಿಯತೆಯನ್ನು ಈಗಾಗಲೇ ಸಾಬೀತು ಮಾಡಿದ್ದ ಬಿಜೆಪಿ ಕಳೆದ ವಿಧಾನ ಸಭಾ ಚುನಾವಣೆಯಲ್ಲೇ ಗ್ರಾಮೀಣ ಮತದಾರರ ಒಲವನ್ನೂ ಗಳಿಸಿತ್ತು.ಗ್ರಾಮೀಣ ಮತದಾರರ ಒಲವು ಈಗಲೂ ಬಿಜೆಪಿಗಿದೆ ಎಂದು ವಿಶ್ಲೇಷಿಸಲು ಪಂಚಾಯಿತಿ ಚುನಾವಣಾ ಫಲಿತಾಂಶಕ್ಕಿಂತ ಉತ್ತಮ ನಿದರ್ಶನ ಅಗತ್ಯವಿಲ್ಲ.

### ವಿಪಕ್ಷಗಳ ಸೋಲು

ಬಿಜೆಪಿ ವಿರುದ್ಧ ಹೋರಾಟ ನಡೆಸುವ ಯಾವುದೇ ನೈತಿಕತೆ ಹೊಂದಿರದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು, ಚುನಾವಣಾ ಪೂರ್ವ ಮೈತ್ರಿಗೆ ನಿರಾಕರಿಸಿ ಈಗ ಬಿಜೆಪಿಯ ವಿರುದ್ಧ ಒಂದಾಗಲು ಹೊರಟಿರುವುದರ ಹಿಂದೆ ಅಧಿಕಾರದ ಆಸೆ ಹೊರತಾಗಿ ಬೇರೇನೂ ಇಲ್ಲ.ಮಾತೆತ್ತಿದರೆ ಬಿಜೆಪಿ ವಿರುದ್ಧ ಟೀಕೆಗಳ ಸುರಿಮಳೆ ಗೈಯ್ಯುವ ಕಾಂಗ್ರೆಸ್ ಪಕ್ಷ ಪ್ರಮುಖ ವಿಪಕ್ಷವಾಗಿ ವಿರೋಧ ಪಕ್ಷಗಳನ್ನು ಒಂದಾಗಿ ಒಯ್ಯುವ ಸಾಮರ್ಥ್ಯವನ್ನೂ ಹೊಂದಿಲ್ಲ.ಆದರೂ ಜೆಡಿಎಸ್ ಹಾಕಿದ ಷರತ್ತಿಗೆ ಒಪ್ಪಿ ಕೆಲವು ಕಡೆ ಈಗ ಮೈತ್ರಿಗೆ ಮುಂದಾಗುತ್ತಿರುವುದು ಕಾಂಗ್ರೆಸ್ ಪಕ್ಷದ ದೌರ್ಬಲ್ಯದ ಸಂಕೇತವೇ ಆಗಿದೆ.

### ಹೆಸರಿಗೆ ಜಾತ್ಯತೀತ

ಬಿಜೆಪಿಯ ಬೆಳವಣಿಗೆಗೆ ಕಡಿವಾಣ ಹಾಕುವ ವಿರೋಧ ಪಕ್ಷಗಳ ಯತ್ನಕ್ಕೆ ಒಂದಾದ ನಂತರ ಒಂದು ಚುನಾವಣೆಗಳಲ್ಲಿ ಹಿನ್ನಡೆಯೇ ಆಗುತ್ತಿದೆ.ರಾಜ್ಯ, , ರಾಷ್ಟ್ರವನ್ನು ದೀರ್ಘ ಕಾಲ ಆಳಿರುವ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷಕ್ಕೆ ಕಡೇ ಪಕ್ಷ ಬಿಜೆಪಿ ವಿರುದ್ಧ ಹೋರಾಡುವ

ನೈತಿಕ ಹಕ್ಕು ಕೂಡಾ ಇಲ್ಲದಂತಾಗಿದೆ ಎನ್ನುವುದು ಈ ಚುನಾವಣೆಯ ಸ್ಪಷ್ಟ ಸಂದೇಶ.ಜೆಡಿಎಸ್ ಕೇವಲ ಅಪ್ಪ-ಮಕ್ಕಳ ಪಕ್ಷ ಎನ್ನುವುದನ್ನು ಸಾಬೀತು ಮಾಡಿದೆ.ಆದರೆ ಅದರ ಜತೆಗೆ ಜಾತ್ಯತೀತ ಎನ್ನುವುದು ಕೇವಲ ಆ ಪಕ್ಷದ ಹೆಸರಿಗೆ ಸೀಮಿತ ಎನ್ನುವುದು ಆ ಪಕ್ಷ ಕೇವಲ ಒಕ್ಕಲಿಗ ಸಮುದಾಯಕ್ಕೆ ಸೇರಿದ ಮತದಾರರು ಹೆಚ್ಚಾಗ್ಗಿರುವ ಜಿಲ್ಲೆಗಳಲ್ಲಿ ಮಾತ್ರ ಬಲ ಪ್ರದರ್ಶನ ಮಾಡಿರುವುದರಿಂದ ಸ್ಪಷ್ಟವಾಗಿದೆ.ಕೇವಲ ಜಾತಿಯ ಆಧಾರದ ಮೇಲೆ ಚುನಾವಣೆ ಗೆಲ್ಲುವ ಪರಿಪಾಠ ಮುಂದುವರಿಸಿರುವ ಜೆಡಿಎಸ್ ಪಕ್ಷ , ಬಿಜೆಪಿಗೆ ತಾನೇ ಪರ್ಯಾಯ ಎಂದು ಬೀಗುತ್ತಿದೆ.ಆದರೆ , ಜೆಡಿಎಸ್ ಪಕ್ಷದ ಸ್ಥಾನ ಯಾವುದು ಎನ್ನುವುದನ್ನು ರಾಜ್ಯದ ಮತದಾರರು ತೋರಿಸಿಕೊಟ್ಟಿದ್ದಾರೆ. ಮಾಜಿ ಪ್ರಧಾನಿ ದೇವೇಗೌಡರೇ ತಮ್ಮ ಪ್ರತಿಷ್ಠೆಯನ್ನು ಪಣಕ್ಕಿಟ್ಟು ಹೋರಾಟ ನಡೆಸಿದರೂ ಆ ಪಕ್ಷಕ್ಕೆ ದಕ್ಕಿದ್ದು ನಾಲ್ಕು ಜಿಲ್ಲಾ ಪಂಚಾಯಿತಿಗಳು ಮಾತ್ರ.ಬಿಜೆಪಿಗೆ ಪರ್ಯಾಯವಾಗಲು ಆ ಪಕ್ಷ ಇನ್ನೂ ಅದೆಷ್ಟು ದೂರ ಸಾಗಬೇಕಿದೆ ಎನ್ನುವುದು ಈಗಲಾದರೂ ಆ ಪಕ್ಷದ ನಾಯಕರಿಗೆ ಅರ್ಥವಾಬೇಕು.

### ಕುಗ್ಗಿದ ಕಾಂಗ್ರೆಸ್

ಕಾಂಗ್ರೆಸ್ ಪಕ್ಷವಂತೂ ಪಂಚಾಯಿತಿ ಚುನಾವಣೆಯಲ್ಲಿ ಒಂದಾಗಿ ಹೋರಾಟ ನಡೆಸುವಲ್ಲೂ ವಿಫಲವಾಗಿದೆ.ನಾಯಕತ್ವದ ತೀವ್ರ ಕೊರತೆ , ಮುಖಂಡರ ನಡುವೆ ನಡೆದಿರುವ ಮುಸುಕಿನ ಗುದ್ದಾಟ, ಹೈಕಮಾಂಡ್‌ನ ನಿಷ್ಕ್ರಿಯತೆ ಇವೆಲ್ಲದರಿಂದಾಗಿ ಕಾಂಗ್ರೆಸ್ ಪಕ್ಷ ಬಿಜೆಪಿಗೆ ಎದುರಾಳಿಯಾಗಿ ಸೆಣೆಸುವ ತಾಕತ್ತನ್ನೂ ಕಳೆದುಕೊಂಡಿದೆ. 2005 ರಲ್ಲಿ 22 ಜಿಲ್ಲಾ ಪಂಚಾಯಿತಿಗಳ ಮೇಲೆ ಹಿಡಿತ ಹೊಂದಿದ್ದ ಕಾಂಗ್ರೆಸ್ ಇದೀಗ ನಾಲ್ಕು ಜಿಲ್ಲೆಗಳಿಗೆ ತನ್ನ ಪ್ರಭಾವವನ್ನು ಸೀಮಿತಗೊಳಿಸಿಕೊಂಡಿದೆ.ಬಿಜೆಪಿ ವಿರುದ್ಧ ಆರೋಪ ಮಾಡುವುದರಲ್ಲೇ ಕಾಲ ಕಳೆದ ಕಾಂಗ್ರೆಸ್ , ಚುನಾವಣೆಯಲ್ಲಿ ಹೋರಾಟ ನಡೆಸುವುದಕ್ಕಿಂತ ಆಂತರಿಕ ಕಚ್ಚಾಟಕ್ಕೆ ತೇಪೆ ಹಾಕುವುದಕ್ಕೆ ತನ್ನ ಶಕ್ತಿ ವ್ಯಯ ಮಾಡುವಂತಾಯಿತು. ಚುನಾವಣೆಯ ನಂತರ ಜೆಡಿಎಸ್ ಜೊತೆಗೆ ಮೈತ್ರಿ ಮಾಡಿಕೊಂಡು ಕೆಲವು ಜಿಲ್ಲಾ ಪಂಚಾಯಿತಿಗಳಲ್ಲಿ ಅಧಿಕಾರಕ್ಕೇರುವ ಪಕ್ಷದ ಚಿಂತನೆಗೂ ಸಾಕಷ್ಟು ವಿರೋಧ ವ್ಯಕ್ತವಾಗುತ್ತಿದೆ.ಆದರೆ , ಪಕ್ಷದ ಹೈಕಮಾಂಡ್ ಜೆಡಿಎಸ್ ಜೊತೆ ಮೈತ್ರಿಗೆ ಅನುಮತಿ ನೀಡಿದರೆ ಕಾಂಗ್ರೆಸ್‌ಪಕ್ಷ ಮತ್ತೊಮ್ಮೆ ಆತ್ಮಹತ್ಯೆಯ ದಾರಿ ಹಿಡಿದಂತಾಗುವುದು ನಿಶ್ಚಿತ.

ಪಂಚಾಯಿತಿ ಚುನಾವಣೆ ಫಲಿತಾಂಶ ಬಿಜೆಪಿಗೆ ರಾಜ್ಯದಲ್ಲಿ ಮತ್ತಷ್ಟು ಬಲ ಹೆಚ್ಚಿಸಿಕೊಳ್ಳಲು ನೆರವಾಗಲಿದೆ. ಇದು ವರೆಗೆ ಜಿಲ್ಲಾ ಮತ್ತು ತಾಲೂಕು ಮಟ್ಟದ ವರೆಗೆ ಪಕ್ಷದ ಸಂಘಟನೆಯ ಬೆಳವಣಿಗೆಗೆ ಸಾಧ್ಯವಾಗದಿದ್ದ ಜಿಲ್ಲೆಗಳಿಗೂ ಪಕ್ಷವೀಗ ತಲುಪಿದೆ.ಗ್ರಾಮೀಣ ಮಟ್ಟದಲ್ಲಿ ಪಕ್ಷದ ಘಟಕಗಳನ್ನು ಆರಂಭಿಸಿ ಪಕ್ಷವನ್ನು ಮತ್ತಷ್ಟು ವ್ಯಾಪಕವಾಗಿ ಬೆಳೆಸಲು ಈ ಫಲಿತಾಂಶ ಸಹಕಾರಿ. ಕೆಳಹಂತದಿಂದ ಬಿಜೆಪಿಯನ್ನು ಬಲಪಡಿಸಲು ಈಗ ಮತ್ತಷ್ಟು ವೇಗ ಸಿಗಲಿದೆ.

### ದೂರಾದ ಆತಂಕ

ಅದಕ್ಕಿಂತ ಹೆಚ್ಚಾಗಿ ಮುಂದಿನ ಎರಡು ವರ್ಷಗಳ ಕಾಲ ಉತ್ತಮ ಆಡಳಿತ ನೀಡಿ ಪಕ್ಷವನ್ನು ಮತ್ತೊಂದು ಅವಧಿಗೆ ಅಧಿಕಾರಕ್ಕೆ ತರಲು ಪಂಚಾಯಿತಿ ಚುನಾವಣೆಯ ಫಲಿತಾಂಶ ನಿಶ್ಚಿತವಾಗಿಯೂ ನೆರವಾಗಲಿದೆ.ಪಕ್ಷದ ಕಾರ್ಯಕರ್ತರಲ್ಲಿ ಇದುವರೆಗೆ ಮೂಡಿದ್ದ ಆತಂಕವೂ ಇದೀಗ ಸ್ವಲ್ಪ ಮಟ್ಟಿಗೆ ದೂರವಾಗಿದೆ.ಪಂಚಾಯಿತಿ ಚುನಾವಣೆಗಳಲ್ಲಿ ಸಾಧಿಸುವ ಗೆಲುವು , ಪಕ್ಷವು ಸರ್ವಸ್ಪರ್ಶಿಯಾಗಿ ಬೆಳೆಯುತ್ತಿದೆ ಎನ್ನುವುದರ ದ್ಯೋತಕ.ಆದ್ದರಿಂದ ಪಕ್ಷವನ್ನು ಅವಲಂಬಿಸಿರುವ ಲಕ್ಷಾಂತರ ಕಾರ್ಯಕರ್ತರಿಗೆ ಪಂಚಾಯಿತಿ ಚುನಾವಣಾ ಫಲಿತಾಂಶ ಮತ್ತಷ್ಟು ವಿಶ್ವಾಸ ಮೂಡಿಸಿದೆ.ರಾಜ್ಯ ಸರ್ಕಾರದ ವಿರುದ್ಧ ಕೇಳಿ ಬಂದ ಆರೋಪಗಳಿಂದಾಗಿ ಮತದಾರರು ಪಕ್ಷದಿಂದ ದೂರ ಸರಿಯುತ್ತಾರೆ ಎನ್ನುವ ಸಹಜವಾದ ಆತಂಕ ಎಲ್ಲೆಡೆ ಮೂಡಿತ್ತು.ಆದರೆ , ಇದೀಗ ಪಕ್ಷದ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ಮೂಡಿದೆ.ಪಂಚಾಯಿತಿ ಮಟ್ಟದಲ್ಲಿ ಪಕ್ಷವನ್ನು ಬಲಗೊಳಿಸುವ ಕಾರ್ಯಕ್ಕೆ ಕೈ ಜೋಡಿಸಿದರೆ ಅದಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ ಎನ್ನುವ ನಂಬಿಕೆ ಕಾರ್ಯಕರ್ತರಲ್ಲಿ ಮೂಡಿದೆ.

ಮುಂದಿನ ಎರಡು ವರ್ಷಗಳಲ್ಲಿ ಪಕ್ಷದ ವರ್ಚಸ್ಸನ್ನು ಹೆಚ್ಚಿಸಿ ರಾಜ್ಯ ರಾಜಕಾರಣದ ಮೇಲೆ ಬಿಜೆಪಿಗೆ ಇರುವ ಹಿಡಿತ ತಪ್ಪದಂತೆ ಕಾರ್ಯತಂತ್ರ ರೂಪಿಸಲು ಪಂಚಾಯಿತಿ ಚುನಾವಣೆ ಫಲಿತಾಂಶವು ನೆರವಾಗಲಿದೆ ಎಂದು ಯಾವ ಸಂಶಯವಿಲ್ಲದೇ ಹೇಳಬಹುದು. ●

## ಗ್ರಾಮೀಣ ಪ್ರದೇಶದಲ್ಲಿ ಬೆಳಗಿದ ಬಿಜೆಪಿ

ಜಿ.ಪಂ ಮತ್ತು ತಾ.ಪಂ ಚುನಾವಣಾ ಫಲಿತಾಂಶ ರಾಜ್ಯ ಬಿಜೆಪಿಗೆ ಹೊಸ ಹುರುಪು ನೀಡಿದೆ. ಅತ್ಯಧಿಕ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿಗಳನ್ನು ಗೆಲ್ಲುವ ಮೂಲಕ ಬಿಜೆಪಿ ತನ್ನ ಪಾರಮ್ಯವನ್ನು ಪುನಃ ಸಾಬೀತು ಮಾಡಿದೆ. ಬಿಜೆಪಿ ತಳಮಟ್ಟದಲ್ಲಿ ಬೇರು ಬಿಟ್ಟಿರುವುದು ಫಲಿತಾಂಶದಿಂದ ವ್ಯಕ್ತವಾಗಿದೆ. ಸ್ಥಳೀಯ ಮಟ್ಟದಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಉತ್ತಮ ಸಾಧನೆ ಮೆರೆದಿದೆ. ಶ್ರೀ ಯಡಿಯೂರಪ್ಪ ನವರು ಹೇಳಿದಂತೆ ನಂ.1 ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. 30 ಜಿಲ್ಲಾ ಪಂಚಾಯ್ತಿಗಳಲ್ಲಿ ಬಿಜೆಪಿ 12, ಕಾಂಗ್ರೆಸ್ ಮತ್ತು ಜೆಡಿಎಸ್ ತಲಾ 4 ರಲ್ಲಿ ಗೆದ್ದಿದ್ದರೆ, ಒಟ್ಟು 10 ಜಿಲ್ಲಾ ಪಂಚಾಯ್ತಿಗಳು ಅತಂತ್ರವಾಗಿವೆ. 176 ತಾಲೂಕು ಪಂಚಾಯ್ತಿಗಳ ಪೈಕಿ ಬಿಜೆಪಿ 68, ಕಾಂಗ್ರೆಸ್ 31, ಜೆಡಿಎಸ್ 24, 2 ಪಕ್ಷೇತರರು ಗೆದ್ದುಕೊಂಡಿದ್ದರೆ, 46 ತಾ.ಪಂ.ಗಳು ಅತಂತ್ರವಾಗಿವೆ. ಬಿಜೆಪಿ ನಿರೀಕ್ಷೆಯಷ್ಟೇ ಗೆದ್ದಿದೆ. ಆದರೆ, ಕಾಂಗ್ರೆಸ್ ಪಕ್ಷ ಮತ್ತೆ ಅತ್ಯಂತ ಕಳಪೆ ಪ್ರದರ್ಶನ ತೋರಿಸಿದ್ದರೆ, ಜೆಡಿಎಸ್ ನಿರ್ದಿಷ್ಟ ಜಿಲ್ಲೆಗಳಲ್ಲಿ ತನ್ನ ಪ್ರಾಬಲ್ಯ ಮೆರೆದಿದ್ದು, ಆ ಪಕ್ಷದ ಕಾರ್ಯಾಧ್ಯಕ್ಷ ಶ್ರೀ ಕುಮಾರಸ್ವಾಮಿಯವರ ಅತಿಯಾದ ಆತ್ಮವಿಶ್ವಾಸಕ್ಕೆ ಕೊಡಲಿ ಪೆಟ್ಟು ಬಿದ್ದಿದೆ.

ಸರ್ಕಾರದ ಅಭಿವೃದ್ಧಿ ಕಾರ್ಯವನ್ನು ಮೆಚ್ಚಿ ಮತದಾರರು ಬಿಜೆಪಿಯ ಕೈಹಿಡಿದಿದ್ದಾರೆ ಎಂದು ಫಲಿತಾಂಶದ ಬಗ್ಗೆ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರು ತೃಪ್ತಿ ವ್ಯಕ್ತಪಡಿಸಿದ್ದಾರೆ.

ಈ ಚುನಾವಣೆ ಫಲಿತಾಂಶ, ಬಿಜೆಪಿಯ ಸಂಘಟನೆ ಹಾಗೂ ಸರ್ಕಾರದ ಸಾಧನೆಗಳಿಗೆ ಸಂದ ಗೆಲುವು ಎಂದು ಬಿಜೆಪಿ ರಾಜ್ಯ ಅಧ್ಯಕ್ಷರಾದ ಶ್ರೀ ಕೆ.ಎಸ್. ಈಶ್ವರಪ್ಪ ಅಭಿಪ್ರಾಯ ಪಟ್ಟಿದ್ದಾರೆ. ●

# ಜಿ.ಪಂ. ಚುನಾವಣೆ-2010, ಫಲಿತಾಂಶ ವಿವರ.

| ಕ್ರ.ಸಂ. | ಜಿಲ್ಲೆಗಳು | ಜಿ.ಪಂ. ಕ್ಷೇತ್ರಗಳು | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅನ್ಯ | ಪಕ್ಷೇತರ |
|---|---|---|---|---|---|---|---|
| 1 | ಮೈಸೂರು | 46(24) | 8 | 21 | 16 | – | 1 |
| 2 | ಚಾಮರಾಜನಗರ | 21(12) | 6 | 15 | – | – | – |
| 3 | ಮಂಡ್ಯ | 40(21) | – | 14 | 24 | – | 2 |
| 4 | ಹಾಸನ | 40(21) | 5 | 2 | 33 | – | – |
| 5 | ಕೊಡಗು | 29(16) | 21 | 6 | 2 | – | – |
| 6 | ದಕ್ಷಿಣಕನ್ನಡ | 35(18) | 23 | 12 | – | – | – |
| 7 | ಉಡುಪಿ | 25(13) | 16 | 9 | – | – | – |
| 8 | ಚಿಕ್ಕಮಗಳೂರು | 34(18) | 25 | 6 | 2 | | 1 |
| 9 | ಶಿವಮೊಗ್ಗ | 31(16) | 16 | 13 | 2 | – | – |
| 10 | ಉತ್ತರಕನ್ನಡ | 36(19) | 9 | 22 | 1 | – | 4 |
| 11 | ಹಾವೇರಿ | 32(17) | 27 | 4 | – | – | 1 |
| 12 | ಧಾರವಾಡ | 22(12) | 15 | 6 | 1 | – | – |
| 13 | ಗದಗ | 18(11) | 11 | 7 | – | – | – |
| 14 | ಬೆಳಗಾವಿ | 86(44) | 63 | 17 | – | – | 6 |
| 15 | ಬಾಗಲಕೋಟೆ | 32(17) | 18 | 13 | – | – | 1 |
| 16 | ಬಿಜಾಪುರ | 38(20) | 16 | 19 | 2 | – | 1 |
| 17 | ಬೀದರ್ | 31(17) | 18 | 2 | 5 | – | 6 |
| 18 | ಗುಲ್ಬರ್ಗಾ | 43(23) | 20 | 19 | 3 | – | 1 |
| 19 | ಯಾದಗಿರಿ | 22(13) | 7 | 15 | – | – | – |
| 20 | ರಾಯಚೂರು | 35(18) | 11 | 15 | 9 | – | – |
| 21 | ಕೊಪ್ಪಳ | 27(14) | 12 | 10 | 4 | – | 1 |
| 22 | ಬಳ್ಳಾರಿ | 36(19) | 18 | 17 | 1 | – | – |
| 23 | ದಾವಣಗೆರೆ | 34(19) | 18 | 16 | – | – | – |
| 24 | ಚಿತ್ರದುರ್ಗ | 34(18) | 12 | 16 | 6 | – | – |
| 25 | ತುಮಕೂರು | 57(30) | 13 | 10 | 33 | – | 1 |
| 26 | ರಾಮನಗರ | 22(12) | – | 10 | 12 | – | – |
| 27 | ಬೆಂಗಳೂರು ಗ್ರಾ. | 18(10) | 9 | 3 | 6 | – | – |
| 28 | ಚಿಕ್ಕಬಳ್ಳಾಪುರ | 27(14) | 1 | 15 | 3 | – | 8 |
| 29 | ಕೋಲಾರ | 28(14) | 7 | 5 | 11 | – | 5 |
| 30 | ಬೆಂಗಳೂರು ನಗರ ಜಿಲ್ಲೆ | 34(19) | 16 | 14 | 4 | – | – |
| | ಒಟ್ಟು | 1013(539) | 441 | 353 | 180 | | 39 |

## ತಾಲ್ಲೂಕು ಪಂಚಾಯಿತಿ ಚುನಾವಣೆ-2010, ಫಲಿತಾಂಶ ವಿವರ. (ಜಿಲ್ಲಾಶಃ)

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ತಾಪಂ. ಕ್ಷೇತ್ರಗಳು | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅನ್ಯ | ಪಕ್ಷೇತರ |
|---|---|---|---|---|---|---|---|---|
| 1 | ಮೈಸೂರು | 7 | 171(92) | 45 | 51 | 68 | | 7 |
| 2 | ಚಾಮರಾಜನಗರ | 4 | 85(45) | 32 | 50 | 1 | | 2 |
| 3 | ಮಂಡ್ಯ | 7 | 152(84) | 8 | 47 | 85 | | 12 |
| 4 | ಹಾಸನ | 8 | 150(86) | 13 | 23 | 112 | | 2 |
| 5 | ಕೊಡಗು | 3 | 49(28) | 29 | 14 | 5 | | 1 |
| 6 | ದಕ್ಷಿಣಕನ್ನಡ | 5 | 129(71) | 78 | 50 | 1 | | |
| 7 | ಉಡುಪಿ | 3 | 95(49) | 59 | 34 | | 1 | 1 |
| 8 | ಚಿಕ್ಕಮಗಳೂರು | 7 | 110(62) | 58 | 30 | 18 | 1 | 3 |
| 9 | ಶಿವಮೊಗ್ಗ | 7 | 109(65) | 41 | 47 | 18 | | 3 |
| 10 | ಉತ್ತರಕನ್ನಡ | 11 | 128(78) | 43 | 55 | 15 | | 15 |
| 11 | ಹಾವೇರಿ | 7 | 118(65) | 87 | 27 | 1 | | 3 |
| 12 | ಧಾರವಾಡ | 5 | 75(45) | 43 | 24 | 7 | | 1 |
| 13 | ಗದಗ | 5 | 71(42) | 44 | 25 | 2 | | |
| 14 | ಬೆಳಗಾವಿ | 10 | 336(177) | 223 | 73 | 13 | 1 | 26 |
| 15 | ಬಾಗಲಕೋಟೆ | 6 | 118(66) | 64 | 50 | | | 4 |
| 16 | ಬಿಜಾಪುರ | 5 | 144(79) | 59 | 52 | 23 | | 10 |
| 17 | ಬೀದರ್ | 5 | 118(63) | 58 | 25 | 23 | 1 | 11 |
| 18 | ಗುಲ್ಬರ್ಗಾ | 7 | 155(87) | 72 | 62 | 19 | 1 | 1 |
| 19 | ಯಾದಗಿರಿ | 3 | 81(43) | 32 | 45 | 3 | | 1 |
| 20 | ರಾಯಚೂರು | 5 | 130(70) | 45 | 57 | 27 | | 1 |
| 21 | ಕೊಪ್ಪಳ | 4 | 103(57) | 35 | 49 | 13 | | 6 |
| 22 | ಬಳ್ಳಾರಿ | 7 | 135(74) | 56 | 62 | 15 | | 2 |
| 23 | ದಾವಣಗೆರೆ | 6 | 129(69) | 64 | 54 | 6 | | 5 |
| 24 | ಚಿತ್ರದುರ್ಗ | 6 | 129(69) | 56 | 35 | 25 | 1 | 12 |
| 25 | ತುಮಕೂರು | 10 | 212(116) | 52 | 39 | 110 | 6 | 5 |
| 26 | ರಾಮನಗರ | 4 | 83(45) | 5 | 35 | 43 | | |
| 27 | ಬೆಂಗಳೂರು ಗ್ರಾ. | 4 | 68(38) | 26 | 16 | 25 | | |
| 28 | ಚಿಕ್ಕಬಳ್ಳಾಪುರ | 6 | 102(55) | 4 | 44 | 22 | 13 | 19 |
| 29 | ಕೋಲಾರ | 5 | 102(57) | 29 | 25 | 33 | | 15 |
| 30 | ಬೆಂಗಳೂರು ನಗರ | 4 | 72(41) | 39 | 24 | 9 | | |
| | 30 | 176 | 3659(2018) | 1499 | 1224 | 742 | 25 | 168 |

# ತಾಲ್ಲೂಕು ಪಂಚಾಯಿತಿ ಚುನಾವಣೆ-2010, ಫಲಿತಾಂಶ ವಿವರ.

| ಕ್ರ.ಸಂ. | ಜಿಲ್ಲೆ | ಕ್ರ.ಸಂ. | ತಾಲ್ಲೂಕು | ತಾಪಂ. ಕ್ಷೇತ್ರಗಳು | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅನ್ಯ | ಪಕ್ಷೇತರ |
|---|---|---|---|---|---|---|---|---|---|
| 1 | ಮೈಸೂರು | 1 | ಪಿರಿಯಾಪಟ್ಟಣ | 20(10) | | 7 | 13 | | |
| | | 2 | ಹುಣಸೂರು | 21(11) | 7 | 3 | 11 | | |
| | | 3 | ಕೆ.ಆರ್.ನಗರ | 21(12) | 3 | 4 | 14 | | |
| | | 4 | ಮೈಸೂರು | 29(16) | 6 | 12 | 11 | | |
| | | 5 | ಎಚ್.ಡಿ.ಕೋಟೆ | 23(12) | 5 | 3 | 10 | | 5 |
| | | 6 | ನಂಜನಗೂಡು | 32(17) | 19 | 10 | 2 | | 1 |
| | | 7 | ಟಿ.ನರಸೀಪುರ | 25(14) | 5 | 12 | 7 | | 1 |
| | | | 7 | 171(92) | 45 | 51 | 68 | | 7 |
| 2 | ಚಾಮರಾಜನಗರ | 8 | ಗುಂಡ್ಲುಪೇಟೆ | 19(10) | 8 | 11 | | | |
| | | 9 | ಚಾಮರಾಜನಗರ | 28(15) | 12 | 15 | | | 1 |
| | | 10 | ಯಳಂದೂರು | 11(6) | 3 | 6 | 1 | | 1 |
| | | 11 | ಕೊಳ್ಳೇಗಾಲ | 27(14) | 9 | 18 | | | |
| | | | 4 | 85(45) | 32 | 50 | 1 | | 2 |
| 3 | ಮಂಡ್ಯ | 12 | ಕೃಷ್ಣರಾಜಪೇಟೆ | 23(13) | 1 | 6 | 15 | | 1 |
| | | 13 | ನಾಗಮಂಗಲ | 18(10) | 1 | 4 | 13 | | |
| | | 14 | ಪಾಂಡವಪುರ | 16(9) | | 4 | 8 | | 4 |
| | | 15 | ಶ್ರೀರಂಗಪಟ್ಟಣ | 15(8) | 1 | 3 | 7 | | 4 |
| | | 16 | ಮಂಡ್ಯ | 28(15) | 1 | 5 | 20 | | 2 |
| | | 17 | ಮದ್ದೂರು | 27(15) | 3 | 13 | 11 | | |
| | | 18 | ಮಳವಳ್ಳಿ | 25(14) | 1 | 12 | 11 | | 1 |
| | | | 7 | 152(84) | 8 | 47 | 85 | | 12 |
| 4 | ಹಾಸನ | 19 | ಸಕಲೇಶಪುರ | 12(7) | | 1 | 11 | | |
| | | 20 | ಬೇಲೂರು | 17(10) | 7 | 3 | 7 | | |
| | | 21 | ಅರಸೀಕೆರೆ | 26(15) | 4 | 3 | 18 | | 1 |
| | | 22 | ಹಾಸನ | 25(14) | | | 25 | | |
| | | 23 | ಆಲೂರು | 11(7) | 2 | 1 | 8 | | |
| | | 24 | ಅರಕಲಗೂಡು | 19(10) | | 5 | 13 | | 1 |
| | | 25 | ಹೊಳೇನರಸೀಪುರ | 15(9) | | 1 | 14 | | |
| | | 26 | ಚನ್ನರಾಯಪಟ್ಟಣ | 25(14) | | 9 | 16 | | |
| | | | 8 | 150(86) | 13 | 23 | 112 | | 2 |
| 5 | ಕೊಡಗು | 27 | ಮಡಿಕೇರಿ | 11(7) | 7 | 4 | | | |
| | | 28 | ಸೋಮವಾರಪೇಟೆ | 19(11) | 13 | 1 | 4 | | 1 |
| | | 29 | ವಿರಾಜಪೇಟೆ | 19(10) | 9 | 9 | 1 | | |
| | | | 3 | 49(28) | 29 | 14 | 5 | | 1 |

| ಕ್ರ.ಸಂ. | ಜಿಲ್ಲೆ | ಕ್ರ.ಸಂ. | ತಾಲ್ಲೂಕು | ತಾಪಂ. ಕ್ಷೇತ್ರಗಳು | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅನ್ಯ | ಪಕ್ಷೇತರ |
|---|---|---|---|---|---|---|---|---|---|
| 6 | ದಕ್ಷಿಣಕನ್ನಡ | 30 | ಮಂಗಳೂರು | 37(19) | 19 | 18 | | | |
| | | 31 | ಬಂಟ್ವಾಳ | 33(18) | 17 | 16 | | | |
| | | 32 | ಬೆಳ್ತಂಗಡಿ | 24(13) | 19 | 5 | | | |
| | | 33 | ಪುತ್ತೂರು | 22(13) | 16 | 5 | 1 | | |
| | | 34 | ಸುಳ್ಯ | 13(8) | 7 | 6 | | | |
| | | | 5 | 129(71) | 78 | 50 | 1 | | |
| 7 | ಉಡುಪಿ | 35 | ಕುಂದಾಪುರ | 35(18) | 22 | 12 | | 1 | |
| | | 36 | ಉಡುಪಿ | 41(21) | 23 | 17 | | | 1 |
| | | 37 | ಕಾರ್ಕಳ | 19(10) | 14 | 5 | | | |
| | | | 3 | 95(49) | 59 | 34 | | 1 | 1 |
| 8 | ಚಿಕ್ಕಮಗಳೂರು | 38 | ಶೃಂಗೇರಿ | 11(7) | 5 | 5 | 1 | | |
| | | 39 | ಕೊಪ್ಪ | 11(6) | 9 | | 2 | | |
| | | 40 | ನರಸಿಂಹರಾಜಪುರ | 11(6) | 5 | 5 | 1 | | |
| | | 41 | ತರೀಕೆರೆ | 20(11) | 8 | 7 | 3 | | 2 |
| | | 42 | ಕಡೂರು | 24(13) | 13 | 4 | 6 | | 1 |
| | | 43 | ಚಿಕ್ಕಮಗಳೂರು | 20(11) | 11 | 4 | 4 | 1 | |
| | | 44 | ಮೂಡಿಗೆರೆ | 13(8) | 7 | 5 | 1 | | |
| | | | 7 | 110(62) | 58 | 30 | 18 | 1 | 3 |
| 9 | ಶಿವಮೊಗ್ಗ | 45 | ಸಾಗರ | 14(9) | | 12 | | | 2 |
| | | 46 | ಸೊರಬ | 18(10) | 6 | 6 | 6 | | |
| | | 47 | ಶಿಕಾರಿಪುರ | 17(10) | 12 | 5 | | | |
| | | 48 | ಹೊಸನಗರ | 11(7) | 8 | 2 | | | 1 |
| | | 49 | ತೀರ್ಥಹಳ್ಳಿ | 13(8) | 4 | 9 | | | |
| | | 50 | ಭದ್ರಾವತಿ | 18(10) | 3 | 9 | 6 | | |
| | | 51 | ಶಿವಮೊಗ್ಗ | 18(11) | 8 | 4 | 6 | | |
| | | | 7 | 109(65) | 41 | 47 | 18 | | 3 |
| 10 | ಉತ್ತರಕನ್ನಡ | 52 | ಕಾರವಾರ | 11(7) | 1 | 5 | | | 5 |
| | | 53 | ಜೋಯಿಡಾ | 11(7) | 1 | 7 | 2 | | 1 |
| | | 54 | ಹಳಿಯಾಳ | 11(7) | | 6 | 5 | | |
| | | 55 | ಯಲ್ಲಾಪುರ | 11(7) | 8 | 3 | | | |
| | | 56 | ಮುಂಡಗೋಡ | 11(6) | 5 | 6 | | | |
| | | 57 | ಶಿರಸಿ | 12(7) | 8 | 3 | | | 1 |
| | | 58 | ಅಂಕೋಲ | 11(7) | 4 | 7 | | | |
| | | 59 | ಕುಮಟಾ | 12(7) | 3 | 2 | 6 | | 1 |
| | | 60 | ಸಿದ್ದಾಪುರ | 11(7) | 4 | 4 | 1 | | 2 |
| | | 61 | ಹೊನ್ನಾವರ | 15(9) | 4 | 8 | 1 | | 2 |
| | | 62 | ಭಟ್ಕಳ | 12(7) | 5 | 4 | | | 3 |
| | | | 11 | 128(78) | 43 | 55 | 15 | | 15 |

| ಕ್ರ.ಸಂ. | ಜಿಲ್ಲೆ | ಕ್ರ.ಸಂ. | ತಾಲ್ಲೂಕು | ತಾಪಂ. ಕ್ಷೇತ್ರಗಳು | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅನ್ಯ | ಪಕ್ಷೇತರ |
|---|---|---|---|---|---|---|---|---|---|
| 11 | ಹಾವೇರಿ | 63 | ಶಿಗ್ಗಾಂವ | 13(8) | 11 | | 1 | | 1 |
| | | 64 | ಸವಣೂರು | 11(6) | 11 | | | | |
| | | 65 | ಹಾನಗಲ್ | 21(12) | 11 | 10 | | | |
| | | 66 | ಹಾವೇರಿ | 20(10) | 19 | 1 | | | |
| | | 67 | ಬ್ಯಾಡಗಿ | 11(6) | 9 | 2 | | | |
| | | 68 | ಹಿರೇಕೇರೂರು | 20(11) | 12 | 6 | | | 2 |
| | | 69 | ರಾಣೇಬೆನ್ನೂರು | 22(12) | 14 | 8 | | | |
| | | | 7 | 118(65) | 87 | 27 | 1 | | 3 |
| 12 | ಧಾರವಾಡ | 70 | ಧಾರವಾಡ | 21(12) | 10 | 7 | 3 | | 1 |
| | | 71 | ನವಲಗುಂದ | 13(8) | 9 | 3 | 1 | | |
| | | 72 | ಹುಬ್ಬಳ್ಳಿ | 13(8) | 5 | 5 | 3 | | |
| | | 73 | ಕಲಘಟಗಿ | 13(8) | 9 | 4 | | | |
| | | 74 | ಕುಂದಗೋಳ | 15(9) | 10 | 5 | | | |
| | | | 5 | 75(45) | 43 | 24 | 7 | | 1 |
| 13 | ಗದಗ | 75 | ನರಗುಂದ | 11(7) | 10 | 1 | | | |
| | | 76 | ರೋಣ | 19(11) | 13 | 6 | | | |
| | | 77 | ಗದಗ | 16(9) | 7 | 9 | | | |
| | | 78 | ಶಿರಹಟ್ಟಿ | 14(9) | 9 | 5 | | | |
| | | 79 | ಮುಂಡರಗಿ | 11(6) | 5 | 4 | 2 | | |
| | | | 5 | 71(42) | 44 | 25 | 2 | | |
| 14 | ಬೆಳಗಾವಿ | 80 | ಚಿಕ್ಕೋಡಿ | 46(25) | 28 | 15 | 0 | | 3 |
| | | 81 | ಅಥಣಿ | 43(22) | 31 | 12 | | | |
| | | 82 | ರಾಯಭಾಗ | 32(17) | 22 | 8 | 1 | 1 | |
| | | 83 | ಗೋಕಾಕ | 41(21) | 20 | 13 | 7 | | 1 |
| | | 84 | ಹುಕ್ಕೇರಿ | 31(16) | 25 | 3 | 3 | | |
| | | 85 | ಬೆಳಗಾವಿ | 40(21) | 14 | 8 | | | 18 |
| | | 86 | ಖಾನಾಪುರ | 23(12) | 18 | 1 | | | 4 |
| | | 87 | ಬೈಲಹೊಂಗಲ | 32(17) | 24 | 6 | 2 | | |
| | | 88 | ಸವದತ್ತಿ | 28(15) | 23 | 5 | | | |
| | | 89 | ರಾಮದುರ್ಗ | 20(11) | 18 | 2 | | | |
| | | | 10 | 336(177) | 223 | 73 | 13 | 1 | 26 |
| 15 | ಬಾಗಲಕೋಟೆ | 90 | ಜಮಖಂಡಿ | 25(14) | 16 | 8 | | | 1 |
| | | 91 | ಬೀಳಗಿ | 13(8) | 7 | 6 | | | |
| | | 92 | ಮುಧೋಳ | 20(11) | 9 | 9 | | | 2 |
| | | 93 | ಬಾದಾಮಿ | 22(12) | 16 | 6 | | | |
| | | 94 | ಬಾಗಲಕೋಟೆ | 16(9) | 8 | 7 | | | 1 |
| | | 95 | ಹುನಗುಂದ | 22(12) | 8 | 14 | | | |
| | | | 6 | 118(66) | 64 | 50 | | | 4 |

| ಕ್ರ.ಸಂ. | ಜಿಲ್ಲೆ | ಕ್ರ.ಸಂ. | ತಾಲ್ಲೂಕು | ತಾಪಂ. ಕ್ಷೇತ್ರಗಳು | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅನ್ಯ | ಪಕ್ಷೇತರ |
|---|---|---|---|---|---|---|---|---|---|
| 16 | ಬಿಜಾಪುರ | 96 | ಬಿಜಾಪುರ | 33(18) | 8 | 18 | 7 | | |
| | | 97 | ಇಂಡಿ | 33(18) | 18 | 4 | 9 | | 2 |
| | | 98 | ಸಿಂಧಗಿ | 30(17) | 16 | 7 | 3 | | 4 |
| | | 99 | ಬಸವನ ಬಾಗೇವಾಡಿ | 28(15) | 8 | 15 | 1 | | 4 |
| | | 100 | ಮುದ್ದೇಬಿಹಾಳ | 20(11) | 9 | 8 | 3 | | |
| | | | 5 | 144(79) | 59 | 52 | 23 | | 10 |
| 17 | ಬೀದರ್ | 101 | ಬಸವಕಲ್ಯಾಣ | 25(14) | 16 | 3 | 5 | | 1 |
| | | 102 | ಭಾಲ್ಕಿ | 23(12) | 14 | 9 | | | |
| | | 103 | ಔರಾದ್ | 23(12) | 16 | 4 | 2 | | 1 |
| | | 104 | ಬೀದರ್ | 23(12) | 7 | 4 | 9 | | 3 |
| | | 105 | ಹುಮನಾಬಾದ್ | 24(13) | 5 | 5 | 7 | 1 | 6 |
| | | | 5 | 118(63) | 58 | 25 | 23 | 1 | 11 |
| 18 | ಗುಲ್ಬರ್ಗಾ | 106 | ಗುಲ್ಬರ್ಗಾ | 26(14) | 18 | 6 | 2 | | |
| | | 107 | ಜೇವರ್ಗಿ | 22(12) | 7 | 12 | 2 | | 1 |
| | | 108 | ಆಳಂದ | 27(15) | 3 | 10 | 13 | 1 | |
| | | 109 | ಅಫಜಲ್‌ಪುರ | 17(10) | 11 | 5 | 1 | | |
| | | 110 | ಸೇಡಂ | 17(10) | 10 | 7 | | | |
| | | 111 | ಚಿಂಚೋಳಿ | 21(12) | 12 | 9 | | | |
| | | 112 | ಚಿತ್ತಾಪುರ | 25(14) | 11 | 13 | 1 | | |
| | | | 7 | 155(87) | 72 | 62 | 19 | 1 | 1 |
| 19 | ಯಾದಗಿರಿ | 113 | ಯಾದಗಿರಿ | 26(14) | 10 | 15 | 1 | | |
| | | 114 | ಶಹಾಪುರ | 25(13) | 10 | 12 | 2 | | 1 |
| | | 115 | ಶೋರಪುರ | 30(16) | 12 | 18 | | | |
| | | | 3 | 81(43) | 32 | 45 | 3 | | 1 |
| 20 | ರಾಯಚೂರು | 116 | ಸಿಂಧನೂರು | 30(16) | 12 | 16 | 2 | | |
| | | 117 | ದೇವದುರ್ಗ | 21(12) | 5 | 3 | 13 | | |
| | | 118 | ರಾಯಚೂರು | 23(12) | 6 | 12 | 5 | | |
| | | 119 | ಮಾನ್ವಿ | 30(16) | 16 | 13 | 1 | | |
| | | 120 | ಲಿಂಗಸಗೂರು | 26(14) | 6 | 13 | 6 | | 1 |
| | | | 5 | 130(70) | 45 | 57 | 27 | | 1 |
| 21 | ಕೊಪ್ಪಳ | 121 | ಯಲಬುರ್ಗಾ | 23(13) | 10 | 10 | 1 | | 2 |
| | | 122 | ಕುಷ್ಟಗಿ | 22(13) | 12 | 8 | 1 | | 1 |
| | | 123 | ಗಂಗಾವತಿ | 32(17) | 10 | 16 | 5 | | 1 |
| | | 124 | ಕೊಪ್ಪಳ | 26(14) | 3 | 15 | 6 | | 2 |
| | | | 4 | 103(57) | 35 | 49 | 13 | | 6 |

| ಕ್ರ.ಸಂ. | ಜಿಲ್ಲೆ | ಕ್ರ.ಸಂ. | ತಾಲ್ಲೂಕು | ತಾಪಂ. ಕ್ಷೇತ್ರಗಳು | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅನ್ಯ | ಪಕ್ಷೇತರ |
|---|---|---|---|---|---|---|---|---|---|
| 22 | ಬಳ್ಳಾರಿ | 125 | ಹಡಗಲಿ | 15(8) | 3 | 12 | | | |
| | | 126 | ಹಗರಿಬೊಮ್ಮನಹಳ್ಳಿ | 16(9) | 6 | 10 | | | |
| | | 127 | ಹೊಸಪೇಟೆ | 16(9) | 8 | 7 | | | 1 |
| | | 128 | ಶಿರಗುಪ್ಪ | 17(10) | 6 | 5 | 6 | | |
| | | 129 | ಬಳ್ಳಾರಿ | 31(16) | 20 | 3 | 8 | | |
| | | 130 | ಸಂಡೂರು | 17(10) | 2 | 15 | | | |
| | | 131 | ಕೂಡ್ಲಿಗಿ | 23(12) | 11 | 10 | 1 | | 1 |
| | | | 7 | 135(74) | 56 | 62 | 15 | | 2 |
| 23 | ದಾವಣಗೆರೆ | 132 | ಹರಿಹರ | 18(10) | 8 | 7 | 2 | | 1 |
| | | 133 | ಹರಪನಹಳ್ಳಿ | 23(12) | 7 | 16 | | | |
| | | 134 | ಜಗಳೂರು | 15(8) | 7 | 5 | 1 | | 2 |
| | | 135 | ದಾವಣಗೆರೆ | 24(13) | 16 | 6 | 1 | | 1 |
| | | 136 | ಹೊನ್ನಾಳಿ | 21(11) | 9 | 11 | | | 1 |
| | | 137 | ಚನ್ನಗಿರಿ | 28(15) | 17 | 9 | 2 | | |
| | | | 6 | 129(69) | 64 | 54 | 6 | | 5 |
| 24 | ಚಿತ್ರದುರ್ಗ | 138 | ಮೊಳಕಾಲ್ಮೂರು | 12(7) | 9 | 3 | | | |
| | | 139 | ಚಳ್ಳಕೆರೆ | 29(15) | 12 | 11 | 5 | | 1 |
| | | 140 | ಚಿತ್ರದುರ್ಗ | 27(15) | 14 | 6 | 5 | 1 | 1 |
| | | 141 | ಹೊಳಲ್ಕೆರೆ | 19(10) | 12 | 5 | 1 | | 1 |
| | | 142 | ಹೊಸದುರ್ಗ | 20(10) | 8 | 6 | 3 | | 3 |
| | | 143 | ಹಿರಿಯೂರು | 22(12) | 1 | 4 | 11 | | 6 |
| | | | 6 | 129(69) | 56 | 35 | 25 | 1 | 12 |
| 25 | ತುಮಕೂರು | 144 | ತಿಪಟೂರು | 17(10) | 9 | 5 | 3 | | |
| | | 145 | ಚಿಕ್ಕನಾಯಕನಹಳ್ಳಿ | 19(10) | 6 | | 7 | 6 | |
| | | 146 | ಶಿರಾ | 26(14) | 1 | 7 | 17 | | 1 |
| | | 147 | ಪಾವಗಡ | 22(12) | 1 | 3 | 14 | | 4 |
| | | 148 | ಮಧುಗಿರಿ | 24(13) | 1 | 18 | 5 | | |
| | | 149 | ಕೊರಟಗೆರೆ | 15(9) | 1 | 3 | 11 | | |
| | | 150 | ತುಮಕೂರು | 27(14) | 19 | 1 | 7 | | |
| | | 151 | ಗುಬ್ಬಿ | 24(12) | 10 | | 14 | | |
| | | 152 | ತುರುವೇಕೆರೆ | 17(10) | 2 | | 15 | | |
| | | 153 | ಕುಣಿಗಲ್ | 21(12) | 2 | 2 | 17 | | |
| | | | 10 | 212(116) | 52 | 39 | 110 | 6 | 5 |
| 26 | ರಾಮನಗರ | 154 | ಮಾಗಡಿ | 18(10) | 1 | 3 | 14 | | |
| | | 155 | ರಾಮನಗರ | 16(9) | | 7 | 9 | | |
| | | 156 | ಚನ್ನಪಟ್ಟಣ | 19(10) | 4 | | 15 | | |
| | | 157 | ಕನಕಪುರ | 30(16) | | 25 | 5 | | |
| | | | 4 | 83(45) | 5 | 35 | 43 | | |

| ಕ್ರ.ಸಂ. | ಜಿಲ್ಲೆ | ಕ್ರ.ಸಂ. | ತಾಲ್ಲೂಕು | ತಾಪಂ. ಕ್ಷೇತ್ರಗಳು | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅನ್ಯ | ಪಕ್ಷೇತರ |
|---|---|---|---|---|---|---|---|---|---|
| 27 | ಬೆಂಗಳೂರು ಗ್ರಾ. | 158 | ನೆಲಮಂಗಲ | 15(8) | 2 | | 13 | | |
| | | 159 | ದೊಡ್ಡಬಳ್ಳಾಪುರ | 20(11) | 12 | 3 | 4 | | |
| | | 160 | ದೇವನಹಳ್ಳಿ | 14(8) | | 6 | 8 | | |
| | | 161 | ಹೊಸಕೋಟೆ | 19(11) | 12 | 7 | | | |
| | | | 4 | 68(38) | 26 | 16 | 25 | | |
| 28 | ಚಿಕ್ಕಬಳ್ಳಾಪುರ | 162 | ಗೌರಿಬಿದನೂರು | 25(13) | 4 | 18 | 3 | | |
| | | 163 | ಚಿಕ್ಕಬಳ್ಳಾಪುರ | 14(8) | | 3 | 8 | | 3 |
| | | 164 | ಗುಡಿಬಂಡೆ | 11(6) | | 4 | 2 | 5 | |
| | | 165 | ಬಾಗೇಪಲ್ಲಿ | 15(8) | | 3 | 3 | 8 | 1 |
| | | 166 | ಶಿಡ್ಲಘಟ್ಟ | 16(8) | | 11 | 5 | | |
| | | 167 | ಚಿಂತಾಮಣಿ | 21(12) | | 5 | 1 | | 15 |
| | | | 6 | 102(55) | 4 | 44 | 22 | 13 | 19 |
| 29 | ಕೋಲಾರ | 168 | ಶ್ರೀನಿವಾಸಪುರ | 17(10) | | 7 | 10 | | |
| | | 169 | ಕೋಲಾರ | 23(13) | 1 | 4 | 8 | | 10 |
| | | 170 | ಮಾಲೂರು | 18(10) | 15 | | 3 | | |
| | | 171 | ಬಂಗಾರಪೇಟೆ | 25(14) | 13 | 7 | 2 | | 3 |
| | | 172 | ಮುಳಬಾಗಿಲು | 19(10) | | 7 | 10 | | 2 |
| | | | 5 | 102(57) | 29 | 25 | 33 | | 15 |
| 30 | ಬೆಂಗಳೂರು ನಗರ | 173 | ಬೆಂಗಳೂರು ಉತ್ತರ | 22(13) | 9 | 8 | 5 | | |
| | | 174 | ಬೆಂಗಳೂರು ದಕ್ಷಿಣ | 12(7) | 4 | 6 | 2 | | |
| | | 175 | ಬೆಂಗಳೂರು ಪೂರ್ವ | 11(7) | 8 | 3 | | | |
| | | 176 | ಆನೇಕಲ್ | 27(14) | 18 | 7 | 2 | | |
| | | | 4 | 72(41) | 39 | 24 | 9 | | |
| | 30 | | 176 | 3659(2018) | 1499 | 1224 | 742 | 25 | 168 |

## ಜಿ.ಪಂ. ಚುನಾವಣೆ–2010, ಫಲಿತಾಂಶ ವಿವರ.

| ಪಕ್ಷ | ಜಿ.ಪಂ. | ಸ್ಥಾನಗಳು |
|---|---|---|
| ಬಿಜೆಪಿ | 12 | 441 |
| ಕಾಂಗ್ರೆಸ್ | 04 | 353 |
| ಜೆಡಿ(ಎಸ್) | 04 | 180 |
| ಅತಂತ್ರ | 10 | |
| ಪಕ್ಷೇತರ | | 39 |
| ಒಟ್ಟು | 30 | 1013 |

## ತಾ.ಪಂ. ಚುನಾವಣೆ–2010, ಫಲಿತಾಂಶ ವಿವರ.

| ಪಕ್ಷ | ತಾ.ಪಂ. | ಸ್ಥಾನಗಳು |
|---|---|---|
| ಬಿಜೆಪಿ | 68 | 1499 |
| ಕಾಂಗ್ರೆಸ್ | 31 | 1224 |
| ಜೆಡಿ(ಎಸ್) | 28 | 742 |
| ಅನ್ಯ | 2 | 25 |
| ಅತಂತ್ರ | 47 | |
| ಪಕ್ಷೇತರ | | 168 |
| ಒಟ್ಟು | 176 | 3658 |

**18 ರಿಂದ 20 ಜಿಲ್ಲಾ ಪಂಚಾಯಿತಿಗಳಲ್ಲಿ ಬಿಜೆಪಿ ಅಧಿಕಾರ ಪಡೆಯಲಿದೆ. ಅದೇ ರೀತಿ 85 ರಿಂದ 90 ತಾಲ್ಲೂಕು ಪಂಚಾಯಿತಿಗಳಲ್ಲೂ ಬಿಜೆಪಿ ಅಧಿಕಾರದ ಗದ್ದುಗೆಗೆ ಏರಲಿದೆ.**

# ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ

ದೇಶವನ್ನೇ ತಲ್ಲಣಗೊಳಿಸಿರುವ 2ಜಿ–ತರಂಗಾಂತರ ಹಗರಣ, ಸಿಡಬ್ಲೂಜಿ ಹಗರಣ, ಆದರ್ಶ ವಸತಿ ಹಗರಣ ಮತ್ತೊಮ್ಮೆ ತಲೆಎತ್ತಿರುವ ಬೋಫೋರ್ಸ್ ಭೂತ ಹೀಗೆ ಕಾಂಗ್ರೆಸ್ ನೇತೃತ್ವದ ಸರ್ಕಾರದ ಹಗರಣಗಳು ಧೂಳೆಬ್ಬಿಸಿವೆ. ಈ ಹಿನ್ನೆಲೆಯಲ್ಲಿ ಪ್ರಾಗ್‌ಜ್ಯೋತಿಶ್‌ಪುರ (ಗುವಾಹತಿ)ಯಲ್ಲಿ ಜನವರಿ 8, 9 ರಂದು ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಅತ್ಯಂತ ಮಹತ್ವ ಪಡೆದಿತ್ತು. ಕೆಲವು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳೂ ಈ ಸಭೆಗೆ ಹೊಸ ಆಯಾಮ ನೀಡಿತ್ತು.

ಕಾರ್ಯಕಾರಿಣಿ ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಶ್ರೀ ನಿತಿನ್ ಗಡ್ಕರಿಜಿ, ಹಿರಿಯ ನಾಯಕರಾದ ಶ್ರೀ ಅಡ್ವಾಣಿಜಿ, ಶ್ರೀಮತಿ ಸುಷ್ಮಾ ಸ್ವರಾಜ್, ಶ್ರೀ ಅರುಣ್ ಜೈಟ್ಲಿ, ಶ್ರೀ ಮುರುಳಿ ಮನೋಹರ್ ಜೋಷಿಯವರನ್ನೊಳಗೊಂಡಂತೆ ಸಂಸದರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ರಾಜ್ಯ ಅಧ್ಯಕ್ಷರು, ಸಚಿವರು, ಮೋರ್ಚಾಗಳ ಪ್ರಮುಖರು, ಪಕ್ಷದ ಪ್ರಮುಖರು ಹಾಗೂ ದೇಶದಾದ್ಯಂತದಿಂದ ಆಗಮಿಸಿದ ಕಾರ್ಯಕಾರಿಣಿ ಸದಸ್ಯರು ಉಪಸ್ಥಿತರಿದ್ದರು. ಸಭೆಯಲ್ಲಿ ಪಕ್ಷದ ಅಧ್ಯಕ್ಷ ಶ್ರೀ ನಿತಿನ್ ಗಡ್ಕರಿಯವರು ಅಧ್ಯಕ್ಷೀಯ ಭಾಷಣ ಮಾಡಿದರು.

## ಪಕ್ಷ ಕಟ್ಟಿದವರನ್ನು ಗೌರವಿಸಿ– ಶ್ರೀ ನಿತಿನ್ ಗಡ್ಕರಿ

ಜನಸಂಘದ ಸ್ಥಾಪನೆಯಾದ 1951 ಅಕ್ಟೋಬರ್ 21 ರಿಂದ ಈವರೆಗೆ ಪಕ್ಷಕ್ಕಾಗಿ ದುಡಿದ ಹಿರಿಯರನ್ನು ಅಕ್ಟೋಬರ್ 21ರಂದು ರಾಜ್ಯ ಘಟಕಗಳು ಸಮಾರಂಭ ಏರ್ಪಡಿಸಿ ಗೌರವಿಸುವಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ನಿತಿನ್ ಗಡ್ಕರಿಯವರು ಈ ಸಂದರ್ಭದಲ್ಲಿ ಕರೆನೀಡಿದರು.



ಡಾ. ಶ್ಯಾಮಪ್ರಸಾದ್ ಮುಖರ್ಜಿ ಹಾಗೂ ಪಂ. ದೀನದಯಾಳ ಉಪಾಧ್ಯಾಯರಂಥ ಹಿರಿಯರ ಬಲಿದಾನದಿಂದ ಕಟ್ಟಿದ ಪಕ್ಷ ಇದು. ಸಂಘಟನಾ ಕಾರ್ಯದಲ್ಲಿ ಈ ಮಹನೀಯರು ನೀಡಿದ ಸೂತ್ರದಂತೆ ಪಕ್ಷ ನಡೆದು ಬಂದಿದೆ. ಕಳೆದ 60 ವರ್ಷಗಳಲ್ಲಿ ಪಕ್ಷ ಕಟ್ಟಿದ ಎಲ್ಲರಿಗೂ ನನ್ನ ನಮನಗಳನ್ನು ಸಲ್ಲಿಸುತ್ತಿರುವುದಾಗಿ ಅವರು ತಿಳಿಸಿದರು.

### ಪೂರ್ವಾಂಚಲ– ಸ್ಫೂರ್ತಿ ತುಂಬುವ ವೀರರ ನಾಡು

ಬ್ರಹ್ಮಪುತ್ರೆಯು ಮಡಿಲ ನಾಡಾದ ಆಸ್ಸಾಂ ಹಾಗೂ ಪೂರ್ವಾಂಚಲದ ಮಹಾವೀರರಿಗೆ ನಮಿಸುವುದಾಗಿ ಅವರು ತಮ್ಮ ಭಾಷಣದಲ್ಲಿ ಹೇಳಿದರು. ಪರಮವೀರರಾದ ಶ್ರೀ ಶಂಕರದೇವ, ಶ್ರೀ ಲಚಿತ್ ಬುರ್‌ಫುಕನ್, ಕನಕಲತಾ ಡೇಕಾ, ಶ್ರೀ ಗೋಪಿನಾಥ ಬೊರ್ಡೊಲೊಯ್ ಮುಂತಾದವರನ್ನು ಅವರು ಸ್ಮರಿಸಿದರು. ನೆರೆಯ ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ತ್ರಿಪುರ, ಮಿಝೋರಾಂ ಹಾಗೂ ನಾಗಾಲ್ಯಾಂಡಿನ ವೀರ ಸುಪುತ್ರರನ್ನು ಅವರು ನೆನಪಿಸಿಕೊಂಡರು. ದೇಶಕ್ಕೆ ಮೊದಲ ಸೂರ್ಯಕಿರಣ ಹೊತ್ತು ತರುವ ಪೂರ್ವಾಂಚಲ ನಮ್ಮ ಸಂಸ್ಕೃತಿಯನ್ನು ಮೆರೆದ ನಾಡೆಂದು ಅವರು ಕೊಂಡಾಡಿದರು.

### ಪೂರ್ವಾಂಚಲದಲ್ಲಿ ಬಿಜೆಪಿ

ಪೂರ್ವಾಂಚಲದಲ್ಲಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಜನಸಂಘ ಹಾಗೂ ಬಿಜೆಪಿ ಬೆಳೆದು ಬಂದಿದೆ. ಆದರೆ ನಮ್ಮ ಪಕ್ಷದ ಯೋಜನೆಗಳಲ್ಲಿ ಪೂರ್ವಾಂಚಲ ಯಾವತ್ತೂ ಪ್ರಾಮುಖ್ಯತೆ ಪಡೆದಿದೆ ಎಂದ ಅವರು ಈ ಭಾಗದಲ್ಲಿ ಪಕ್ಷವನ್ನು ಬೆಳೆಸಿದ ಹಿರಿಯರನ್ನು ಸ್ಮರಿಸಿದರು.

1980ರ ದಶಕದ ಆಸ್ಸಾಂ ಚಳುವಳಿಯಲ್ಲಿ ಬಾಂಗ್ಲಾ ನುಸುಳುವಿಕೆಯ ವಿರುದ್ಧದ ಹೋರಾಟಕ್ಕೆ ಬೆಂಬಲವಾಗಿ ಬಿಜೆಪಿ ನಿಂತಿದ್ದನ್ನು ನೆನಪಿಸಿದ ಅವರು ಭಾರತದ ಅಖಂಡತೆಗೆ ಈ ಭಾಗದ ಜನರ ಬದ್ಧತೆಯನ್ನು ಕೊಂಡಾಡಿದರು. ಈ ನುಸುಳುಕೋರರನ್ನು ಹೊರಹಾಕುವಲ್ಲಿ ಯಾವ ಶಕ್ತಿಯೂ ನಮ್ಮನ್ನು ತಡೆಯಲಾರದು ಎಂದು ಅವರು ಘೋಷಿಸಿದರು. ಬಿಹಾರದಲ್ಲಿನ ವಿಜಯವನ್ನು ಪ್ರಸ್ತಾಪಿಸಿದ ಅವರು ಆಸ್ಸಾಂ ಚುನಾವಣೆಯಲ್ಲೂ ಇಲ್ಲಿನ ಜನತೆ ಸುರಕ್ಷೆ ಹಾಗೂ ಸುರಾಜ್‌ಗೆ ಮಹತ್ವ ನೀಡಲಿದ್ದಾರೆಂದು ಆಶಿಸಿದರು. ಈ ಭಾಗದ 6 ಗುಡ್ಡಗಾಡು ಜನಾಂಗದವರನ್ನು ಪ.ವರ್ಗದಲ್ಲಿ ಸೇರಿಸುವಂತೆ ಅವರು ಒತ್ತಾಯಿಸಿದರು.

### ಯುಪಿಎ 2– ಭ್ರಷ್ಟಾಚಾರದ ಸಾಮ್ರಾಜ್ಯ.

ಕೇಂದ್ರದ ಯುಪಿಎ ಸರ್ಕಾರವನ್ನು ಭ್ರಷ್ಟಾಚಾರದ ಕೂಪವೆಂದು ಬಣ್ಣಿಸಿದ ಶ್ರೀ ಗಡ್ಕರಿಯವರು ಯುಪಿಎ–2 ರ 20 ತಿಂಗಳ ಆಡಳಿತದಲ್ಲಿ ಮಹಾಭ್ರಷ್ಟಾಚಾರಗಳಾದ 2ಜಿ ತರಂಗಾಂತರ, ಸಿಡಬ್ಲೂಜಿ, ಆದರ್ಶ ವಸತಿ ಸಮುಚ್ಛಯ, ಪುನಃ ತಲೆಎತ್ತಿದ ಬೋಫೋರ್ಸ್ ಭೂತ ಹೀಗೆ ಹತ್ತು ಹಲವು ರೀತಿಯಲ್ಲಿ ದೇಶದ ಜನತೆಗೆ ದ್ರೋಹ ಬಗೆಯಲಾಗಿದ್ದು 2010ನ್ನು ಮಹಾಭ್ರಷ್ಟತೆಯ ವರ್ಷವನ್ನಾಗಿ ಯುಪಿಎ ಆಚರಿಸಿದೆ ಎಂದು ಮಾರ್ಮಿಕವಾಗಿ ನುಡಿದರು.

ಪ್ರಧಾನಿಯವರು ನಿರ್ಭೀತರಾಗಿದ್ದಲ್ಲಿ ಜೆಪಿಸಿ ವಿಚಾರಣೆಗೆ ಒಪ್ಪುತ್ತಿಲ್ಲವೇಕೆ ಎಂದು ಪ್ರಶ್ನಿಸಿದ ಅವರು ಅನೇಕ ಅಪರಾಧಿಗಳು ತಪ್ಪಿಸಿಕೊಳ್ಳುವಂತೆ ಯುಪಿಎ ಸರ್ಕಾರ ಪ್ರಕರಣಗಳನ್ನು ಮುಚ್ಚಿ ಹಾಕುವಲ್ಲಿ ನಿರತವಾಗಿದೆ ಎಂದು ದೂರಿದರು.

### ಭಯೋತ್ಪಾದನೆ ತಡೆ– ಯುಪಿಎ ಸಂಪೂರ್ಣ ವಿಫಲ

ಕಾಶ್ಮೀರ ಸಮಸ್ಯೆಯ ವಿಷಯದಲ್ಲಾಗಲೀ ಅಥವಾ ನಕ್ಸಲೀಯರ ವಿರುದ್ಧದ ಹೋರಾಟದಲ್ಲಾಗಲಿ ಕೇಂದ್ರ ಸರ್ಕಾರದ ವಿಫಲತೆಯನ್ನು ಎತ್ತಿ ತೋರಿದ ಶ್ರೀ ಗಡ್ಕರಿಯವರು ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ಕಾಂಗ್ರೆಸ್ ಪಕ್ಷ ಹಾಗೂ ಜನತೆಯ ಗಮನವನ್ನು ಬೇರೆಡೆ ಸೆಳೆಯಲು "ಹಿಂದು ಭಯೋತ್ಪಾದನೆ" ಎಂಬ ಶಬ್ದವನ್ನು ಹುಟ್ಟು ಹಾಕಿದೆ ಎಂದು ದೂರಿದರು. ತಮ್ಮ ಬೇಜವಾಬ್ದಾರಿತನದಿಂದ ಕಾಂಗ್ರೆಸ್ ನಾಯಕರು ದೇಶದ ಭದ್ರತೆಯನ್ನೇ ದುರ್ಬಲಗೊಳಿಸಿದ್ದಾರೆಂದು ಅವರು ಪ್ರತಿಕ್ರಯಿಸಿದರು. 2004ರ ನಂತರ ನಡೆದ ಭಯೋತ್ಪಾದನಾ ಕೃತ್ಯಗಳ ವರದಿ, ಸರ್ಕಾರ ನಡೆಸಿದ ತನಿಖೆ, ದಾಖಲಿಸಿದ ಪ್ರಕರಣಗಳು ಹಾಗೂ ವಿಧಿಸಿದ ಶಿಕ್ಷೆಗಳ ಮಾಹಿತಿಯನ್ನು ಜನತೆಯ ಮುಂದಿಡುವಂತೆ ಕೇಂದ್ರ ಸರ್ಕಾರವನ್ನು ಅವರು ಕೋರಿದರು.

### ಬೆಲೆ ಏರಿಕೆ ತಡೆಯಲ್ಲಿ ವಿಫಲ.

ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ ಯುಪಿಎ–2 ಅತ್ಯಂತ ದುಬಾರಿ ಆಡಳಿತ ಎನಿಸಿದ್ದು ಬೆಲೆ ಏರಿಕೆ ತಡೆಯುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದ್ದು ದೇಶದ ಜನತೆ ತತ್ತರಿಸುವಂತೆ ಮಾಡಿದೆ ಎಂದು ಶ್ರೀ ನಿತಿನ್ ಗಡ್ಕರಿಯವರು ದೂರಿದರು.

### ಪೂರ್ವಾಂಚಲ ಅಭಿವೃದ್ಧಿಗೆ ಬಿಜೆಪಿ ಯೋಜನೆಗಳು

ಪೂರ್ವಾಂಚಲದ ವಿಷಯದಲ್ಲಿ ಕಾಂಗ್ರೆಸ್ ಯಾವತ್ತಿಗೂ ತಾತ್ಸಾರ ಭಾವ ತೋರುತ್ತಾ ಬಂದಿದ್ದು ಈ ಭಾಗದ ಬೆಳವಣಿಗೆಯ ಬಗ್ಗೆ ಬಿಜೆಪಿಯ ಯೋಜನೆಗಳನ್ನು ಅವರು ಪ್ರಸ್ತಾಪಿಸಿದರು. ಮಾನ್ಯ ಶ್ರೀ ಅಟಲ್‌ಜೀಯವರು ಪ್ರಧಾನ ಮಂತ್ರಿಯಾಗಿದ್ದಾಗ ಪೂರ್ವಾಂಚಲದ ಬಗ್ಗೆ ಪ್ರತ್ಯೇಕ ವಿಭಾಗ ಪ್ರಾರಂಭಿಸಿ ಈ ಭಾಗದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿದ್ದನ್ನು ಅವರು ಪ್ರಸ್ತಾಪಿಸಿ ನಾಗಾಲ್ಯಾಂಡ, ಮಿಝೋರಾಂಗಳಲ್ಲಿನ ಪ್ರತ್ಯೇಕತಾವಾದಿಗಳ ಕೂಗನ್ನು ಹಿಮ್ಮೆಟ್ಟಿಸುವಲ್ಲಿ ಯುಪಿಎ ಸರ್ಕಾರದ ವಿಫಲತೆಗಳನ್ನು ಎತ್ತಿ ತೋರಿದರು. ಪೂರ್ವಾಂಚಲ-2025 ವಿಷನ್ ದಾಖಲೆ ಪತ್ರವನ್ನು ತಯಾರಿಸಲು ಬಿಜೆಪಿ ಒಂದು ಸಮರ್ಥ ತಂಡವನ್ನು ರಚಿಸಿದ್ದು ಪೂರ್ವಾಂಚಲ ಸಂಪರ್ಕ ಪ್ರಕೋಷ್ಠವನ್ನೂ ಬಿಜೆಪಿ ಹೊಂದಿದೆ. ಈ ಭಾಗದ ಜನರ ಸಂಕಷ್ಟಗಳ ನಿವಾರಣೆಗೆ ಬಿಜೆಪಿ ಬದ್ಧತೆ ಹೊಂದಿದೆ ಎಂದು ಅವರು ಘೋಷಿಸಿದರು.

### ಸುಶಾಸನಕ್ಕೆ ಬಿಜೆಪಿ ಬದ್ಧತೆ

ಉತ್ತಮ ಆಡಳಿತ ನೀಡಲು ಬಿಜೆಪಿ ಬದ್ಧವಾಗಿದ್ದು ಬಿಜೆಪಿ ಆಡಳಿತದ ವಿವಿಧ ರಾಜ್ಯ ಸರ್ಕಾರಗಳು ಜನಪರ ಕಾರ್ಯಗಳನ್ನು ಪ್ರತಿಬಿಂಬಿಸುವ ಸುರಾಜ್ ಸಂಕಲ್ಪ ಪ್ರದರ್ಶಿನಿ ಜನಪರ ಆಡಳಿತ ನೀಡುವ ನಮ್ಮ ಯತ್ನಗಳಿಗೆ ಹಿಡಿದ ಕನ್ನಡಿಯಾಗಿದೆ ಎಂದು ಅವರು ವರ್ಣಿಸಿದರು. "ಅಭಿವೃದ್ಧಿಗೋಸ್ಕರ ಆಡಳಿತ" ಎಂಬ ನಮ್ಮ ಘೋಷವಾಕ್ಯಕ್ಕೆ ಬಿಜೆಪಿ ಸದಾ ನಿಷ್ಠೆ ಹೊಂದಿದೆ ಎಂದೂ ಅವರು ತಿಳಿಸಿದರು.

### ಅಂತರಾಷ್ಟ್ರೀಯ ರಂಗ

ಎನ್‌ಡಿಎ ಆಡಳಿತಾವಧಿಯಲ್ಲಿ ಭಾರತ-ಅಮೇರಿಕ ಸಂಬಂಧದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಿತ್ತು. ಆದರೆ ಯುಪಿಎ ಆಡಳಿತಾವಧಿಯಲ್ಲಿ ವಿದೇಶ ನೀತಿ ಶಿಥಿಲಗೊಂಡಿದ್ದು ಭಯೋತ್ಪಾದನೆಯಲ್ಲಿ ಪಾಕಿಸ್ತಾನದ ಕೈವಾಡವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ತೋರುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಅವರು ನುಡಿದರು. ಪದೇ ಪದೇ ಪಾಕಿಸ್ತಾನದಿಂದ ಭಾರತ ಅವಮಾನಕ್ಕೊಳಗಾಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ವಿದೇಶ ನೀತಿ ಗೊತ್ತುಗುರಿಯಿಲ್ಲದೇ ಸಾಗಿದ್ದು ನೆರೆಯ ಚೀನ, ನೇಪಾಳ, ಶ್ರೀಲಂಕಾಗಳಿಂದಲೂ ನಾವು ವಿದೇಶ ವ್ಯವಹಾರದಲ್ಲಿ ಹಿನ್ನಡೆ ಹೊಂದುತ್ತಿದ್ದೇವೆಂದು ಅವರು ಹೇಳಿದರು.

### 2010ರ ಮೇಲೊಂದು ಹಿನ್ನೋಟ

ಅಯೋಧ್ಯಾ ವಿವಾದದ ಬಗ್ಗೆ 2010ರಲ್ಲಿ ಬಂದ ತೀರ್ಪು ರಾಮಮಂದಿರ ನಿರ್ಮಾಣದ ನಮ್ಮ ಸಂಕಲ್ಪಕ್ಕೆ ಹೆಚ್ಚಿನ ಬಲ ತಂದಿದೆ. ಸಂಘಟನಾತ್ಮಕವಾಗಿ ಬಿಜೆಪಿ ಕಳೆದ ವರ್ಷ ಹೆಚ್ಚು ಸಕ್ರಿಯವಾಗಿತ್ತು. ವಿಶೇಷವಾಗಿ 15,000 ಕ್ಕೂ ಹೆಚ್ಚು ಕಾರ್ಯಕರ್ತರು ವಿವಿಧ ರಾಜ್ಯಗಳಲ್ಲಿ ಪ್ರಾಥಮಿಕ ಹಂತದಲ್ಲಿ ತರಬೇತಿ ಪಡೆದರು. ತರಬೇತಿ ಕಾರ್ಯಕ್ರಮ ಇನ್ನೂ ಚುರುಕಾಗಬೇಕಿದೆ. ನಮ್ಮ ಅಂತ್ಯೋದಯ ಕಾರ್ಯಕ್ರಮ ತನ್ನ ನಿರ್ದಿಷ್ಟ ಯೋಜನೆಯೆಡೆಗೆ ದಾಪುಗಾಲು ಹಾಕಿದೆ. "ಅಸಂಘಟಿತ ಕಾಮಗಾರ ಮಹಾಸಂಘ"ದ ಮೂಲಕ ಕೂಲಿ ಕಾರ್ಮಿಕರ ಸ್ಥಿತಿ ಸುಧಾರಣೆಗೆ ಪಕ್ಷ ಮುಂದಾಗಿದೆ ಎಂದು ಅವರು ನುಡಿದರು.

ವಿವಿಧ ಕ್ಷೇತ್ರಗಳಲ್ಲಿ ನಮ್ಮ ಚಟುವಟಿಕೆ ವಿಸ್ತಾರಕ್ಕೆ ಅನುಕೂಲವಾಗುವಂತೆ ಕೆಲವು ಹೊಸ ಪ್ರಕೋಷ್ಠಗಳನ್ನು ತೆರೆಯಲಾಗಿದೆ. ಎಲ್ಲ ಪ್ರಕೋಷ್ಠ ಪ್ರಮುಖರೂ ತಮ್ಮ ಕಾರ್ಯ ವಿಸ್ತಾರದ ವರದಿಯನ್ನು ನೀಡುವಂತೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ನಮ್ಮ ಪಕ್ಷದ ಹೊಸ ಕೇಂದ್ರೀಯ ಕಛೇರಿ ನಿರ್ಮಾಣಗೊಳ್ಳಲಿದ್ದು ಅದರಲ್ಲಿ "ಸಂಶೋಧನೆ ಹಾಗೂ ತರಬೇತಿ ಕೇಂದ್ರ"ವೊಂದನ್ನು ಸ್ಥಾಪಿಸಲಿದ್ದೇವೆ. ಸಂಶೋಧನಾ ಕೇಂದ್ರದಲ್ಲಿ ವಿವಿಧ ಕ್ಷೇತ್ರಗಳ ಪರಿಣಿತರು ನಮ್ಮ ಉದ್ದೇಶಿತ ಯೋಜನೆಗಳ ಬಗ್ಗೆ ಹೆಚ್ಚಿನ ಸಲಹೆ ನೀಡಲಿದ್ದಾರೆ. ಪಕ್ಷದ ಹಿರಿಯರಾಗಿದ್ದ ಶ್ರೀ ಜಗನಾಥರಾವ್ ಜೋಶಿ (ಕರ್ನಾಟಕ) ಹಾಗೂ ಶ್ರೀ ಸುಂದರ ಸಿಂಗ್ ಭಂಡಾರಿ (ರಾಜಸ್ಥಾನ) ಇವರ ಸ್ಮರಣಾರ್ಥ ಸಂಶೋಧನಾ ಹಾಗೂ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಅವಕಾಶಗಳ ಬಗ್ಗೂ ನಾವು ಯೋಚಿಸುತ್ತಿದ್ದೇವೆ ಎಂದು ಅವರು ಹೇಳಿದರು.

ಈ ವರ್ಷ ಹೆಚ್ಚಿನ ಚಟುವಟಿಕೆಗಳಿಂದ ಕೂಡಿದೆ. ಆಸ್ಸಾಂ, ಪಶ್ಚಿಮಬಂಗಾಲ, ತಮಿಳುನಾಡು, ಕೇರಳ ಹಾಗೂ ಪಾಂಡಿಚೇರಿಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು ನಮ್ಮ ಸಂಘಟನೆ ಹಾಗೂ ಕಾರ್ಯ ವಿಸ್ತಾರಕ್ಕೆ ಒಂದು ಅವಕಾಶ ಬಂದಿದೆ. ಜೊತೆಗೆ ಸಹಕಾರ ಹಾಗೂ ನ್ಯಾಯಾಂಗ ಕ್ಷೇತ್ರದಲ್ಲಿ ಹೆಚ್ಚಿನ ಸುಧಾರಣೆ ಆಗಬೇಕಿದ್ದು ಕಾನೂನು ಪ್ರಕೋಷ್ಠ ಹಾಗೂ ಸಹಕಾರ ಪ್ರಕೋಷ್ಠಗಳು ವಿಶೇಷ ಸಮಾವೇಶಗಳನ್ನು ಏರ್ಪಾಡು ಮಾಡಲು ಸೂಚಿಸಲಾಗಿದೆ. "ಸಮಗ್ರ ಅಟಲಜಿ" ಎಂಬ ಹೆಸರಿನಲ್ಲಿ ಮಾನ್ಯ ಶ್ರೀ ಅಟಲ್‌ಜಿ ಯವರ ಬರಹ ಹಾಗೂ ಭಾಷಣಗಳ ಸಂಕಲನ ಹೊರತರಲು ಉದ್ದೇಶಿಸಲಾಗಿದೆ ಎಂದು ಶ್ರೀ ನಿತಿನ್ ಗಡ್ಕರಿಯವರು ವಿವರಿಸಿದರು.

### ನಮ್ಮ ಆಸೆಗೆ ಹೊಸ ಬೆಳಕು ಮೂಡಲಿ

ತಮ್ಮ ಭಾಷಣದ ಕೊನೆಯಲ್ಲಿ ಶ್ರೀ ಗಡ್ಕರಿಯವರು ಹೊಸ ಹುರುಪಿನೊಂದಿಗೆ ಪಕ್ಷದ ಕಾರ್ಯಕರ್ತರು ದುಡಿಯಬೇಕಿದೆ, ಯಾವುದೇ ರೀತಿಯ ನಿರಾಶೆಗೆ ಒಳಗಾಗದೆ ಬಡತನ, ಭ್ರಷ್ಟಾಚಾರ ಹಾಗೂ ಭಯೋತ್ಪಾದನೆಯಿಂದ ದೇಶದ ಜನತೆಯನ್ನು ಪಾರು ಮಾಡುವತ್ತ ಬಿಜೆಪಿ ಶ್ರಮಿಸಬೇಕಿದೆ ಎಂದು ಕರೆನೀಡಿದರು. ಜನರಲ್ಲಿಯೂ ಹೊಸ ಆಶಾ ಭಾವನೆಯನ್ನು ಮೂಡಿಸಬೇಕಿದೆ. 30 ವರ್ಷಗಳ ಹಿಂದೆ ಮುಂಬೈನಲ್ಲಿ ಸಮುದ್ರ ತಟದಲ್ಲಿ ನಿಂತು ಮಾನ್ಯಶ್ರೀ ಅಟಲ್‌ಜಿಯವರು ಹೇಳಿದ ಮಾತು ಇಂದಿಗೂ ನನಗೆ ಹೆಚ್ಚಿನ ಉತ್ಸಾಹ ತರುತ್ತಾದೆ. "ಕತ್ತಲು ಕಳೆಯಲಿದೆ, ಉದಯರವಿ ಮೂಡಲಿದ್ದಾನೆ, ಕಮಲವು ಅರಳಲಿದೆ" ಎಂದು ಅಂದು ಅವರು ಹೇಳಿದ ಮಾತಿನಿಂದ ನಮ್ಮ ಉತ್ಸಾಹವನ್ನು ವರ್ಧಿಸಿಕೊಂಡು ಇಂದೂ ಸಹ ನಾವು ಮುನ್ನಡೆಯಬೇಕಿದೆ ಎಂದು ಶ್ರೀ ಗಡ್ಕರಿಯವರು ನುಡಿದರು.

## ಕಪ್ಪು ಹಣ ವಾಪಸ್‌ಗೆ ಸರ್ಕಾರ ಹಿಂದೇಟು- ಶ್ರೀ ಅಡ್ವಾಣಿಜಿ

ಸಕಾರದಲ್ಲಿರುವ ಅನೇಕ ಮಂದಿ ಶಾಮಿಲಾಗಿರುವ ಕಾರಣ ವಿದೇಶಿ ಬ್ಯಾಂಕುಗಳಲ್ಲಿರುವ ಕಪ್ಪು ಹಣವನ್ನು ವಾಪಸ್ ತರಲು ಯುಪಿಎ ಸರ್ಕಾರ ಹಿಂದೇಟು ಹಾಕುತ್ತಿದೆ ಎಂದು ಬಿಜೆಪಿಯ ಹಿರಿಯ ಮುಖಂಡ ಶ್ರೀ ಎಲ್.ಕೆ. ಅಡ್ವಾಣಿ ಟೀಕಿಸಿದರು.

ಸರ್ಕಾರದಲ್ಲಿ ಇರುವ ಕೆಲವು ವ್ಯಕ್ತಿಗಳು ಮತ್ತು ಅವರ ಸ್ನೇಹಿತರ ಕಪ್ಪುಹಣ ವಿದೇಶಿ ಬ್ಯಾಂಕುಗಳಲ್ಲಿ ಇರುವುದರಿಂದ ಈ ಹಣವನ್ನು ದೇಶಕ್ಕೆ ವಾಪಸ್ ತರಿಸಲು ಕೇಂದ್ರ ಆಸಕ್ತಿ ತೋರಿಸುತ್ತಿಲ್ಲ ಎಂದು ಅವರು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಣಿ ಸಭೆಯಲ್ಲಿ ತಿಳಿಸಿದರು.

'ಸ್ವಾತಂತ್ರ್ಯಾ ನಂತರ 300 ಲಕ್ಷ ಕೋಟಿಗೂ ಅಧಿಕ ಹಣವನ್ನು ವಿದೇಶಿ ಬ್ಯಾಂಕುಗಳಲ್ಲಿ ಇಡಲಾಗಿದೆ. ಈ ಹಣವನ್ನು ವಾಪಸ್ ತರಿಸಿ ಅಭಿವೃದ್ಧಿ ಕಾರ್ಯಗಳಿಗೆ ಬಳಸುವಂತೆ ನಾನು ಮತ್ತು ಪಕ್ಷದ ಇತರ ಮುಖಂಡರು ಪ್ರಧಾನಿ ಅವರಿಗೆ ಪತ್ರ ಬರೆದು ಕೋರಿದ್ದೇವೆ' ಎಂದು ಅವರು ತಿಳಿಸಿದರು..

ವಿದೇಶಿ ಬ್ಯಾಂಕುಗಳಲ್ಲಿ ಇಡಲಾಗಿರುವ ಕಪ್ಪು ಹಣವನ್ನು ತರಿಸಿಕೊಂಡರೆ ವಿದ್ಯುತ್ ಉತ್ಪಾದನೆ, ಆಸ್ಪತ್ರೆ ಮತ್ತು ಶಾಲೆಗಳ ನಿರ್ಮಾಣಕ್ಕೆ ಬಳಸಬಹುದಾಗಿದೆ. ಎಂದು ಅವರು ಅಭಿಪ್ರಾಯಪಟ್ಟರು.

## ನಿರ್ಣಯ–1 2010–ಭ್ರಷ್ಟಾಚಾರದ ವರ್ಷ

ಕಾಂಗ್ರೆಸ್ ನೇತೃತ್ವದ ಯುಪಿಎ–2 ಆಡಳಿತಾವಧಿಯಲ್ಲಿ ಭಾರತವು ಅತ್ಯಂತ ಸೋಗಲಾಡಿ, ಭ್ರಷ್ಟ ದೇಶವೆಂದು 2010ರ ಕೊನೆಯ ಹೊತ್ತಿಗೆ ವಿಶ್ವದೆದುರು ಸಾದರ ಪಡಿಸಲ್ಪಟ್ಟಿದೆ. ಕಾಮನ್‌ವೆಲ್ತ್ ಆಟದ ಹಗರಣ, ಆದರ್ಶ ಸೊಸೈಟಿ ಹಗರಣ ಹಾಗೂ 2ಜಿ ತರಂಗಾಂತರ ಹಗರಗಣಗಳ ಮೂಲಕ ದೇಶದ ಜನತೆಯ ಬೆವರಿನ ಹಣವನ್ನು ಲೂಟಿ ಹೊಡೆದ ಕಾಂಗ್ರೆಸ್ ತನ್ನ ನಿರ್ಲಜ್ಜ ಧೋರಣೆಯನ್ನು ಮುಂದುವರೆಸಿದೆ. ಈ ಹಗರಣಗಳಿಂದಾಗಿ ಅಧಿಕಾರದಲ್ಲಿರುವವರ ಹಾಗೂ ಖಾಸಗಿ ಉದ್ಯಮಿಗಳ ನಡುವಿನ ಭ್ರಷ್ಟ ಹೊಂದಾಣಿಕೆ ಬಹಿರಂಗಗೊಂಡಿದ್ದು ಇದನ್ನು ತಡೆಯಲು ಇದ್ದ ಎಲ್ಲ ವ್ಯವಸ್ಥೆಯನ್ನು ನಾಶಗೊಳಿಸುವತ್ತ ಸರ್ಕಾರ ಸಾಗಿದೆ. ಇಡೀ ದೇಶವೇ ಈ ಹಗರಣಗಳಿಂದ ಸ್ತಂಭೀಭೂತಗೊಂಡಿದೆ.

23 ವರ್ಷಗಳ ಹಿಂದೆ 1988ರ ಜನವರಿಯಲ್ಲಿ ಎರ್ನಾಕುಲಂ ಬಿಜೆಪಿ ಅಧಿವೇಶನದಲ್ಲಿ ಅಂದಿನ ಕೇಂದ್ರ ಸರ್ಕಾರದ ವಿರುದ್ಧ ಕೈಗೊಂಡ ನಿರ್ಣಯದ ಪರಿಸ್ಥಿತಿ ಇಂದೂ ಇದೆ. ಅಂದಿನ ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ತನ್ನ ಹಾಗೂ ಕುಟುಂಬದ ವಿರುದ್ಧ ಹೊರಿಸಲಾಗಿರುವ ಭ್ರಷ್ಟಾಚಾರದ ಆಪಾದನೆಗಳನ್ನು ತಳ್ಳಿಹಾಕಿದ್ದರು. ಅಂದೂ ಸಹ ತನಿಖೆಯ ಹಾದಿಯನ್ನು ಸರ್ಕಾರ ತಪ್ಪಿಸುವ ಹುನ್ನಾರ ನಡೆಸಿತ್ತು. ಅಂದೂ ಸಹ ದೊಡ್ಡ ಪ್ರಮಾಣದ ಭ್ರಷ್ಟಾಚಾರದಿಂದ ಜನತೆಯ ಗಮನ ಬೇರೆಡೆ ಸೆಳೆಯಲು ವಿರೋಧ ಪಕ್ಷದ ಮೇಲೆ ಕೋಮುವಾದದ ಆಪಾದನೆ ಮಾಡಲಾಗಿತ್ತು.

ಇಂದು 2010ರ ಜನವರಿಯಲ್ಲಿ ಅದೇ ಸ್ಥಿತಿ ಇದೆ. ತನಿಖೆಯ ಹಾದಿ ತಪ್ಪಿಸಲಾಗಿದೆ. ಸಿಬಿಐ ಸಂಪೂರ್ಣ ನೆಲಕಚ್ಚಿದೆ.

**ಪುನಃ ಬೋಫೋರ್ಸ್:** 1987ಕ್ಕೆ ಹೋಲಿಸಿದರೆ ಇಂದು ಭ್ರಷ್ಟಾಚಾರ ತನ್ನ ಅಗಾಧ ಪ್ರಮಾಣದ ಸ್ವರೂಪದ ಪರಿಚಯ ನೀಡಿದೆ. ಅನಿವಾರ್ಯವೆನಿಸುತ್ತಿರುವುದರಿಂದ ಅಂದಿನ ಪ್ರಧಾನಿಯ ಜೊತೆಗೆ ಒಟ್ಟಾವಿಯೋ ಖ್ವಟ್ರೋಚಿಯ ನಿಕಟ ಸಂಬಂಧದ ಬಗ್ಗೆ ಇಲ್ಲಿ ಉಲ್ಲೇಖಿಸಬೇಕಾಗಿದೆ. ಅಂದಿನ ಪ್ರಧಾನಿಯ ಖಾಸಗಿ ವಲಯದ ಜೊತೆಗೆ ಖ್ವಟ್ರೋಚಿ ತೀವ್ರ ಸಂಬಂಧ ಹೊಂದಿದ್ದು ಈ ಪ್ರಕರಣಕ್ಕೆ ಹೊಸ ಆಯಾಮ ನೀಡಿತ್ತು.

ಅಂದು ಕಾಂಗ್ರೆಸ್ ಪಕ್ಷ ಹಾಗೂ ಅಂದಿನ ಪ್ರಧಾನಿ ಖ್ವಟ್ರೋಚಿ ರಕ್ಷಣೆಗೆ ಟೊಂಕಕಟ್ಟಿ ನಿಂತಿದ್ದರು. ಯಾವುದೇ ಲಂಚ ನೀಡಿಲ್ಲವೆಂದು ಪ್ರತಿಪಾದಿಸಲಾಗಿತ್ತು. ಇದೀಗ ಬೋಫೋರ್ಸ್ ಭೂತ ಪುನಃ ಎದ್ದು ನಿಂತಿದೆ. ಲಂಚ ನೀಡಿರುವ ಸತ್ಯ ಹೊರಬಿದ್ದಿದೆ. ಇದೀಗ ಆದಾಯ ತೆರಿಗೆ ಮೇಲ್ಮನವಿ ನ್ಯಾಯ ಮಂಡಳಿಯು ಖ್ವಟ್ರೋಚಿ ಲಂಚ ಪಡೆದಿರುವುದನ್ನು ಖಚಿತ ಪಡಿಸಿದೆ. ಈ ಭ್ರಷ್ಟ ಹಣವನ್ನು ಆದಾಯ ತೆರಿಗೆಯಿಂದ ತಪ್ಪಿಸಿಕೊಳ್ಳಲು ಒಂದು ವಲಯದಿಂದ ಇನ್ನೊಂದು ವಲಯಕ್ಕೆ ವರ್ಗಾಯಿಸಲಾಗಿದೆ ಎಂದೂ ತಿಳಿದು ಬಂದಿದೆ. ಕಾಂಗ್ರೆಸ್ ಪಕ್ಷ ಮಾತ್ರ ಲಂಚ ಸ್ವೀಕಾರವನ್ನು ನಿರಾಕರಿಸುತ್ತ ಪ್ರಕರಣವನ್ನು ರದ್ದುಗೊಳಿಸ ಹೊರಟಿತ್ತು.

ಈ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಿ ಕಾಂಗ್ರೆಸ್ ಸರ್ಕಾರ ಖ್ವಟ್ರೋಚಿ ದೇಶಬಿಟ್ಟು ತಪ್ಪಿಸಿಕೊಳ್ಳುವಂತೆ ಮಾಡಿತ್ತು. ಆತ ಈ ದೇಶದ ಹಾಗೂ ಹೊರದೇಶದ ನ್ಯಾಯಲಯವನ್ನು ಎದುರಿಸದಂತೆ ಆತನನ್ನು ರಕ್ಷಿಸಲಾಗಿತ್ತು. ದೇಶದ ಹಿತಕ್ಕೆ ಬದಲಾಗಿ ಆರೋಪಿಯನ್ನು ರಕ್ಷಿಸುವ ನಾಚಿಕೆಗೆಟ್ಟ ಹಾದಿಯನ್ನು ಕಾಂಗ್ರೆಸ್ ತುಳಿದಿತ್ತು. ಇಂದು ಈ ಪ್ರಕರಣವನ್ನು ಕಾಂಗ್ರೆಸ್ ಸಾಯಿಸಿದ್ದು, ಈ ಪ್ರಕರಣವೇ ಇಲ್ಲವೆಂದು ಸಿ.ಬಿ.ಐ. ಘೋಷಿಸಬಹುದು.

**2ಜಿ ತರಂಗಾಂತರ ಪ್ರಕರಣ ರಾಷ್ಟ್ರ ಕಂಡ ಅತಿದೊಡ್ಡ ಹಗರಣ:** ತನ್ನ ಗಾತ್ರ, ಪರಿಣಾಮ ಹಾಗೂ ವ್ಯಾಪ್ತಿಗಳಿಂದಾಗಿ 2ಜಿ ತರಂಗಾಂತರ ಹಗರಣ ದೇಶ ಕಂಡ ಅತಿದೊಡ್ಡ ಭ್ರಷ್ಟಾಚಾರವೆನಿಸಿದೆ. ಆದರೆ ತನ್ನ ಸರಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಪ್ರಧಾನ ಮಂತ್ರಿಗಳು ಇದರಲ್ಲಿ ಸಿಲುಕಿರುವವರನ್ನು ರಕ್ಷಿಸ ಹೊರಟಿರುವಂತಿದೆ.ಈ ಹಗರಣದಿಂದಾಗಿ ಕಡಿಮೆ ಎಂದರೆ 95 ಸಾವಿರ ಕೋಟಿ ಹೆಚ್ಚು ಅಂದರೆ 1 ಲಕ್ಷ 76 ಸಾವಿರ ಕೋಟಿ ರೂ. ಹಣ ದೇಶದ ಬೊಕ್ಕಸಕ್ಕೆ ಹಾನಿಯಾಗಿದೆ. ಈ ಹಾನಿಯ ಮೊತ್ತವನ್ನು ಸಿಎಜಿ ಸಂಸ್ಥೆ ವೈಜ್ಞಾನಿಕವಾಗಿ ಲೆಕ್ಕಹಾಕಿದ್ದು ಇದೀಗ ಈ ಹಾನಿಯ ಮೊತ್ತದ ಲೆಕ್ಕಾಚಾರದ ಬಗ್ಗೆ ಶಂಕೆ ಉಂಟು ಮಾಡಲು ಕೇಂದ್ರ ಸರ್ಕಾರ ಹೊರಟಿದೆ. ಇದರಲ್ಲಿ ಲಂಚದ ಹಣ, ಅದನ್ನು ಹಂಚಿಕೊಂಡ ರೀತಿ ಈ ಲಂಚದ ಹಣವನ್ನು ಇಟ್ಟಿರುವ ಸ್ಥಳ ಇವೆಲ್ಲವೂ ತನಿಖೆಯಾಗಬೇಕಿದೆ. ಈ ಭ್ರಷ್ಟ ಹಣವನ್ನು ಹೊರತರುವುದು ದೊಡ್ಡ ಸಾಹಸವೇ ಸರಿ. ಪ್ರಧಾನ ಮಂತ್ರಿಯವರ 'ಏನನ್ನೂ ಮಾಡಬೇಡ' ಎಂಬ ಧೋರಣೆಯೇ ಪರಿಸ್ಥಿತಿ ಕೈಮೀರಿ ಹೋಗಲು ಕಾರಣವಾಗಿದೆ. ಮೂಕ ಪ್ರೇಕ್ಷಕನಂತೆ ನಿಂತಿರುವ ಪ್ರಧಾನ ಮಂತ್ರಿಗಳ ಕಾರ್ಯಾಲಯದ ಗೌರವ ದೇಶದ ಜನರೆದುರು ಕುಗ್ಗಿದೆ. ಜೊತೆಗೆ ದೇಶದ ಬೊಕ್ಕಸವನ್ನು ಕೊಳ್ಳೆ ಹೊಡೆಯಲು ಬಿಡಲಾಗಿದೆ.

**ಕಾಮನ್ ವೆಲ್ತ್ ಕ್ರೀಡಾಕೂಟದ ಹಗರಣ:** ದೆಹಲಿಯಲ್ಲಿ 2010ರ ಕಾಮನ್ ವೆಲ್ತ್ ಕ್ರೀಡಾಕೂಟವನ್ನು ಕಾಂಗ್ರೆಸ್ ಏಜೆಂಟರು ತಮ್ಮ ಕಿಸೆ ಭರ್ತಿಮಾಡಿಕೊಳ್ಳಲು ಚೆನ್ನಾಗಿಯೇ ಉಪಯೋಗಿಸಿಕೊಂಡರು. ಕ್ರೀಡಾಕೂಟ ಪ್ರಾರಂಭಕ್ಕೆ ಮೊದಲು ಕಳಪೆ, ಅನಿಯಮಿತ ಕೆಲಸ ಮತ್ತು ಭ್ರಷ್ಟಾಚಾರದಿಂದಾಗಿ ದೇಶವೇ ತಲೆತಗ್ಗಿಸುವಂತಾಯಿತು. ಪುನಃ ಪ್ರಧಾನಮಂತ್ರಿಯವರ ಕಾರ್ಯಾಲಯ ಸ್ವಜನ ಪಕ್ಷಪಾತ ಹಾಗೂ ಏರಿದ ನಿರ್ಮಾಣವೆಚ್ಚದಿಂದಾಗಿ ಸುದ್ದಿಯಲ್ಲುಳಿಯಿತು. ವೃತ್ತಿಪರತೆ ಹೊಂದಿರದ ಸ್ವಜನರು ನಿರ್ಮಾಣದ ಗುತ್ತಿಗೆ ಪಡೆದಿದ್ದರಿಂದ ದೇಶದ ಗೌರವ ಕುಗ್ಗಿತು. ಇಡೀ ಪ್ರಕರಣ ಬಟ್ಟ ಬಯಲಾಗಿದ್ದರೂ ಯಾವುದೇ ಹಿಡಿತ ಹೊಂದಿಲ್ಲದ ಶುಂಗ್ಲೂ ಆಯೋಗ ಭಷ್ಟ್ರತೆಯ ಹುಡುಕಾಟದಲ್ಲಿ ತೊಡಗಿದೆ.

**ಕಾರ್ಗಿಲ್ ಯುದ್ಧದ ವಿಧವೆಯರಿಗೆ ಮೋಸ:** ಆದರ್ಶ ಸೊಸೈಟಿ ಹಗರಣ ದೇಶದ ಹೃದಯಕ್ಕೆ ಹಾನಿಯಂಟು ಮಾಡಿದೆ. ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧರ ಪತ್ನಿಯರಿಗೆ ಮೀಸಲಿದ್ದ ಜಾಗವನ್ನು ಕೆಲ ರಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ರಾಜಕೀಯ ವ್ಯಕ್ತಿಗಳು ನುಂಗಿ ಹಾಕಿದ್ದರು. ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಅತ್ತೆ ಹಾಗೂ ಕೆಲ ಸಂಬಂಧಿಕರು ಈ ರೀತಿ ಜಾಗ ನುಂಗಿದ್ದರಿಂದ ಅಲ್ಲಿನ ಮುಖ್ಯಮಂತ್ರಿ ರಾಜೀನಾಮೆ ನೀಡ ಬೇಕಾಯಿತು. ಇದೀಗ ಮುಖ್ಯಮಂತ್ರಿಗಳ ಸಹಿ ಹೊಂದಿದ್ದ ಆದರ್ಶ ಸೊಸೈಟಿ ದಾಖಲೆ ಮಾಯವಾಗಿದೆ ಎಂದು ದೂರು ದಾಖಲಾಗಿದೆ. ಕಾಂಗ್ರೆಸ್ ನಾಚಿಕೆ ಇಲ್ಲದೆ ದೇಶದೆದುರು ತಲೆ ತಗ್ಗಿಸಿ ನಿಂತಿದೆ.

**ಕಾಂಗ್ರೆಸ್ ಆಡಳಿತದ ಅಸ್ಸಾಮಿನಲ್ಲಿ ಭ್ರಷ್ಟಾಚಾರ:** ಕಾಂಗ್ರೆಸ್ ಆಡಳಿತದ ರಾಜ್ಯಗಳಲ್ಲೂ ಭ್ರಷ್ಟಾಚಾರ ಮಿತಿಮೀರಿದೆ. ನಾವು ಅಸ್ಸಾಮಿನ ಪ್ರಾಗ್‌ಜ್ಯೋತಿಶ್‌ಪುರದಲ್ಲಿ ಸೇರಿರುವುದರಿಂದ ಈ ರಾಜ್ಯದಲ್ಲಿನ ಹಗರಣಗಳ ಬಗ್ಗೆ ಹೇಳಲೇಬೇಕಿದೆ. ನಾರ್ಥ್‌ಕಾಚಾರ್ ಡಿಸ್ಟ್ರಿಕ್ಟ್ ಆಟೋನೊಮಸ್ ಕೌನ್ಸಿಲ್‌ನಲ್ಲಿ 1000 ಕೋಟಿ ರೂ ಹಗರಣ ನಡೆದಿದೆ ಎಂದು ನ್ಯಾಷನಲ್ ಇನ್ವೆಸ್ಟಿಗೇಶನ್ ಏಜೆನ್ಸಿ ಕಂಡು ಹಿಡಿದಿದೆ. ಈ ಏಜೆನ್ಸಿ ಹೆಸರಿಸದಿದ್ದರೂ, ದ ವೀಕ್ ಪತ್ರಿಕೆ ಈ ಹಗರಣದಲ್ಲಿ ಅಸ್ಸಾಂನ 7 ಮಂದಿ ಸಚಿವರು, ಹಲವಾರು ಅಧಿಕಾರಿಗಳು ಭಾಗಿಯಾಗಿದ್ದಾರೆಂದು ವರದಿ ಮಾಡಿದೆ. ನಂತರ ನಡೆದ ದಾಳಿಯಲ್ಲಿ ಸಿಬಿಐ, ಅಧಿಕಾರಿಯೊಬ್ಬರ ಸಂಬಂಧಿಕರ ಮನೆಯಿಂದ ಹಗರಣದ 13.45 ಕೋಟಿ ರೂ. ಹಣವನ್ನು ವಶಪಡಿಸಿಕೊಂಡಿದೆ. ಅದೇ ರೀತಿ ನರ್ಮ್ ಯೋಜನೆಯ 200 ಕೋಟಿ ರೂ. ಹಣವನ್ನು ಗುವಾಹತಿಯ ವಿವಿಧ ಕಾಮಗಾರಿಗಳಲ್ಲಿ ಕೊಳ್ಳೆ ಹೊಡೆಯಲಾಗಿದೆ ಎಂದೂ ಪತ್ತೆಯಾಗಿದೆ.

**ಅರುಣಾಚಲದಲ್ಲೂ ಹಗರಣ:** ಅರುಣಾಚಲದಲ್ಲಿಯೂ ಕಾಂಗ್ರೆಸ್ ಸರ್ಕಾರ ಸಾರಿಗೆ ಸಬ್ಸಿಡಿಯನ್ನು ದುರುಪಯೋಗಪಡಿಸಿಕೊಂಡಿದ್ದು, 686 ಕೋಟಿ ರೂ. ಹಗರಣ ಕೇವಲ ಸಿಮೆಂಟ್ ಹಾಗೂ ಸ್ಟೀಲ್ ಇವೆರಡಲ್ಲೇ ನಡೆದಿದೆ. ಎಂದು ಮಾಧ್ಯಮದಲ್ಲಿ ವರದಿಯಾಗಿದೆ.

ಈ ಹಗರಣಗಳು ಕಳವಳಕ್ಕೆ ಕಾರಣವಾಗಿವೆ. ಇನ್ನೊಂದು ಪ್ರಮುಖ

ಅಂಶವೆಂದರೆ ಕ್ಯಾಬಿನೆಟ್ ಸಚಿವರ ನೇಮಕ ಹಾಗೂ ಖಾತೆ ಹಂಚಿಕೆ ಪ್ರಧಾನ ಮಂತ್ರಿಗಳ ಅಧಿಕಾರ ವ್ಯಾಪ್ತಿಗೆ ಸೇರಿದ್ದಾದರೂ ಯುಪಿಎ 2 ರಲ್ಲಿ ಈ ಅಧಿಕಾರವನ್ನು ಕೆಲವು ಕಾರ್ಪೋರೇಟ್ ವಲಯ ದಿಗ್ಗಜರು ಹಾಗೂ ಕೆಲವು ಮಾಧ್ಯಮ ಸ್ವಹಿತಾಸಕ್ತರು ಚಲಾಯಿಸಿದ ವರದಿ ದಿಗ್ಭ್ರಾಂತಿಯನ್ನುಂಟುಮಾಡುವಂತಹುದು.

**ಸಂಸ್ಥೆಗಳ ಹಗರಣ:** ಕೇಂದ್ರ ವಿಚಕ್ಷಣಾ ಆಯೋಗದ ಆಯುಕ್ತರ ನೇಮಕ ನಿಜಕ್ಕೂ ಯುಪಿಎ ಸರ್ಕಾರದ ಅಧಃಪತನದ ಸಂಕೇತ. ಕಳೆದ 10 ವರ್ಷಗಳಿಂದ ಕೇರಳದಲ್ಲಿ ಭ್ರಷ್ಟಾಚಾರದ ಆಪಾದನೆ ಹೊತ್ತಿರುವ ವ್ಯಕ್ತಿಯನ್ನು ಸರ್ಕಾರ ಈ ಹುದ್ದೆಗೆ ನೇಮಿಸಿತು. 2009 ರಲ್ಲಿ ಟೆಲಿಕಾಂ ಕಾರ್ಯದರ್ಶಿಯಾಗಿದ್ದ ಈ ವ್ಯಕ್ತಿ ಸಿಎಜಿಯಿಂದ ಸಂಬಂಧಪಟ್ಟ ದಾಖಲೆಯೊಂದನ್ನು ನೀಡುವಂತೆ ಕೋರಿಕೆ ಬಂದಾಗ ಆ ದಾಖಲೆ ತನ್ನ ಬಳಿ ಇಲ್ಲ, ಬೇಕಾದಲ್ಲಿ ಸಿಬಿಐನಿಂದ ಪಡೆಯಿರಿ ಎಂದು ಉತ್ತರ ನೀಡಿದ್ದ. ಇತ್ತೀಚಿಗೆ ಕೂಡ ಸಿಎಜಿ ಕಾರ್ಯವೈಖರಿಯನ್ನು ಆತ ವಿರೋಧಿಸಿದ್ದ. ಎಲ್ಲ ವಿರೋಧದ ನಡುವೆಯೂ ಈ ವ್ಯಕ್ತಿಯೇ 2 ಜಿ ತರಂಗಾಂತರ ಹಗರಣದ ತನಿಖೆ ಮಾಡಬೇಕಿರುವ ಸಿಬಿಐ ಮುಖ್ಯಸ್ಥರನ್ನು ನೇಮಕ ಮಾಡಿದ್ದಾನೆ. ಇದು ತನಿಖಾ ಸಂಸ್ಥೆಗಳ ಸಂಪೂರ್ಣ ಅವಹೇಳನವಾಗಿದೆ.

**ಜೆಪಿಸಿಯ ತೀವ್ರ ಅವಶ್ಯಕತೆ:** ದೇಶವಿಂದು ಎದುರಿಸುತ್ತಿರುವ ಮೂರು ಪ್ರಮುಖ ಹಗರಣಗಳ ತೀವ್ರತೆ, ವ್ಯಾಪ್ತಿ ಹಾಗೂ ಗಾತ್ರಗಳ ಆಧಾರದ ಮೇಲೆ ಬಿಜೆಪಿ ಈ ಹಗರಣಗಳನ್ನು ಸಂಯುಕ್ತ ಸಂಸದೀಯ ಮಂಡಳಿಯ ಮೂಲಕ ತನಿಖೆ ನಡೆಸಬೇಕೆಂದು ಒತ್ತಾಯಿಸುತ್ತದೆ. ಖಾತೆಗಳಲ್ಲಿನ ಅವ್ಯವಹಾರ, ಮೊತ್ತ ಇತ್ಯಾದಿಗಳ ತನಿಖೆಯನ್ನು ಪಿಎಸಿ ಮಾಡುವುದೇನೋ ಸರಿ. ಆದರೆ 2ಜಿ, ಸಿಡಬ್ಲ್ಯೂಜಿ ಹಾಗೂ ಆದರ್ಶ ಹಗರಣಗಳು ಕಾರ್ಯಕಾರಿ, ಶಾಸಕೀಯ ಹಾಗೂ ಉದ್ಯಮ ವಲಯ ಹೀಗೆ ವಿಭಿನ್ನ ಕ್ಷೇತ್ರಗಳ ಕೈವಾಡ ಹೊಂದಿರುವುದರಿಂದ ಹಾಘೂ ನಿರ್ದಿಷ್ಟ ತನಿಖೆಗಳಿಗೆ ವಿವಿಧ ರೀತಿಯ ತಡೆಯೊಡ್ಡುವ ಅವಕಾಶ ಹೊಂದಿರುವುದರಿಂದ ಈ ಹಗರಣಗಳನ್ನು ಪಿಎಸಿ ಯಿಂದ ತನಿಖೆ ನಡೆಸುವುದು ಸೂಕ್ತವಲ್ಲ. ಸಚಿವರನ್ನು ತನಿಖೆಗೆ ಒಳಪಡಿಸಿವುದು ಪಿಎಸಿಯಿಂದ ಸಾಧ್ಯವಿಲ್ಲ ಹಾಗೂ ಅನೇಕ ಸಂಕೀರ್ಣ ವಿಷಯಗಳ ಆಳಕ್ಕೂ ಪಿಎಸಿ ಹೋಗಲಾರದು

ಇದಕ್ಕೆ ವ್ಯತಿರಿಕ್ತವಾಗಿ ಜೆಪಿಸಿ ತನಿಖೆಯ ಹೆಚ್ಚಿನ ವ್ಯಾಪ್ತಿ ಪಡೆದಿದೆ. ಎಷ್ಟೇ ಆಳವಾದ ಹಗರಣವಿದ್ದರೂ ಅದು ಭ್ರಷ್ಟಾಚಾರದ ಸೂಕ್ಷ್ಮ ಎಳೆಗಳನ್ನು ಹುಡುಕಿ ತೆಗೆಯಬಲ್ಲದು. ಎಷ್ಟೇ ಬಲಾಢ್ಯರನ್ನೂ ಅದು ವಿಚಾರಣೆ ನಡೆಸಲು ಸಾಧ್ಯ. ಇದರಿಂದಾಗಿಯೇ ಕಾಂಗ್ರೆಸ್ ಜೆಪಿಸಿಯನ್ನು ವಿರೋಧಿಸುತ್ತಿದೆ.

ದೇಶದಲ್ಲಿಂದು ಅಪನಂಬಿಕೆ ಹಾಗೂ ನಿರಾಶೆಗಳು ತಾಂಡವವಾಡುತ್ತಿವೆ. ಜನತೆ ರಾಜಕಾರಣಿಗಳನ್ನು ದ್ವೇಷಿಸಲು ಪ್ರಾರಂಭಿಸಿದ್ದು ರಾಜಕೀಯ ಪಕ್ಷಗಳ ಗೌರವ ಕುಂದುತ್ತಿದೆ. ನ್ಯಾಯಾಲಯದಿಂದಲಾದರೂ ನ್ಯಾಯ ದೊರಕೀತೇ ಎಂದು ಜನತೆ ನಿರೀಕ್ಷಿಸಿದ್ದಾರೆ. ಮಾಧ್ಯಮಗಳೂ ಆತ್ಮ ವಿಮರ್ಶೆಗೆ ಒಳಗಾಗಿವೆ. ಪ್ರಧಾನಿ ಯಾವುದೇ ರೀತಿಯಲ್ಲಿ ಪರಿಸ್ಥಿತಿ ಸುಧಾರಣೆಗೆ ಯತ್ನಿಸುತ್ತಿಲ್ಲ.

**ಭಾರತವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಿ:** ಭ್ರಷ್ಟಾಚಾರವನ್ನು ಆಮೂಲಾಗ್ರವಾಗಿ ವಿರೋಧಿಸಲು ಭಾರತೀಯ ಜನತಾ ಪಾರ್ಟಿಯು ಈ ಪ್ರಾಗ್‌ಜ್ಯೋತಿಶ್‌ಪುರದಿಂದ ನಿರ್ಣಯಿಸುತ್ತದೆ. ಜನತೆಯಲ್ಲಿ ಪುನಃ ವ್ಯವಸ್ಥೆಯ ಬಗ್ಗೆ ನಂಬಿಕೆ ಹುಟ್ಟುವಂತೆ ಮಾಡಲು ಬಿಜೆಪಿಯು ಈ ಕಾರ್ಯದಲ್ಲಿ ಪ್ರೇರಕ ಶಕ್ತಿಯಾಗಿ ನಿಲ್ಲಲಿದೆ. ಬಿಜೆಪಿ ಇತ್ತೀಚಿಗಷ್ಟೇ ಹೋರಾಟದ ಮೂಲಕ ಹುಟ್ಟಿದ ರಾಜಕೀಯ ಪಕ್ಷ. ಭಾರತವನ್ನು ಭ್ರಷ್ಟ ಮುಕ್ತರನ್ನಾಗಿಸುವ ಈ ಕಾರ್ಯದಲ್ಲಿ ಜನತೆ, ಸಂಘಟನೆಗಳು, ಸಾಮಾಜಿಕ ಗುಂಪುಗಳು ಹಾಗೂ ಪಕ್ಷಗಳು ಜೊತೆ ಸೇರಬೇಕಿದೆ. ಜೊತೆಯಾಗಿ ನಾವು ಈ ಮಹಾನ್ ದೇಶವನ್ನು ಕಾಂಗ್ರೆಸ್ಸಿನ ಭ್ರಷ್ಟತೆ ಹಾಗೂ ಲೂಟಯಿಂದ ರಕ್ಷಿಸಬೇಕಿದೆ. ವಿಶ್ವದ ಯಾವುದೇ ಭಾಗದಲ್ಲಿರುವ ದೇಶದ ಕಪ್ಪು ಹಣವನ್ನು ನಾವು ಹೊರತರಬೇಕಿದೆ. ಈ ಕಾರ್ಯಕ್ಕೆ ರಾಷ್ಟ್ರೀಯತೆಯ ಸಂಕಲ್ಪ ಹಾಗೂ ರಾಜಕೀಯ ಇಚ್ಛಾಶಕ್ತಿ ಬೇಕಿದೆ.

ಈ ಗೊಂದಲಮಯ ರಾಜಕೀಯ ವಾತಾವರಣದಲ್ಲಿ ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಕಾರ್ಯಕಾರಿಣಿಯು ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿದೆ.

* ಕಾಂಗ್ರೆಸ್ ಪಕ್ಷದ ಬೃಹತ್ ಭ್ರಷ್ಟಾಚಾರದ ಬಗ್ಗೆ ಜನತೆಯ ಗಮನ ಸೆಳೆಯಲು ದೇಶದ ಎಲ್ಲಾ ಭಾಗಗಳಲ್ಲಿ ಪ್ರತಿಭಟನೆಗಳನ್ನು ಆಯೋಜಿಸುವುದು.
* ಜಾಗೃತ ಅಂತರ್ಜಲ ಬಳಕೆದಾರರನ್ನು ಒಗ್ಗೂಡಿಸಿ ಭ್ರಷ್ಟತೆಯ ವಿರುದ್ಧ ಅಭಿಪ್ರಾಯ ಮೂಡಿಸುವುದು.
* ಜನಸಾಮಾನ್ಯರಿಗೆ ಆತಂಕ ತಂದಿರುವ ಬೆಲೆ ಏರಿಕೆ ತಡೆಯುವಂಥ ಪ್ರಾಥಮಿಕ ಅವಶ್ಯಕತೆಯಲ್ಲೇ ಎಡವಿರುವ ಕೇಂದ್ರ ಸರ್ಕಾರದ ವಿಫಲತೆ ಬಗ್ಗೆ ಅರಿವು ಮೂಡಿಸುವುದು.
* ಲೂಟಿ ಕೋರರನ್ನು ಶಿಕ್ಷಿಸಲು ಹಾಗೂ ಕಪ್ಪು ಹಣವನ್ನು ಹೊರತರಲು ಕಾನೂನಿನ ಮೂಲಕ ಕ್ರಮ ಕೈಗೊಳ್ಳುವುದು.

## ನಿರ್ಣಯ–2

## ಪೂರ್ವಾಂಚಲದಲ್ಲಿ ಹದಗೆಟ್ಟ ಪರಿಸ್ಥಿತಿ

ಆಸ್ಸಾಂ ಹಾಗೂ ಪೂರ್ವಾಂಚಲದ ಇತರ ರಾಜ್ಯಗಳು ಐದು ಬೇರೆ ದೇಶಗಳಿಂದ ಸುತ್ತುವರೆದ ಭೂಭಾಗವಾಗಿದೆ. ಭೂತಾನ್, ನೇಪಾಳ, ಚೀನಾ, ಮೈನಮಾರ್ ಹಾಗೂ ಬಾಂಗ್ಲಾದೇಶಗಳು ಈ ಪ್ರದೇಶದ ಸುತ್ತಲೂ ಇರುವ ದೇಶಗಳಾಗಿವೆ. ಪ್ರಾಕೃತಿಕ ಸೌಂದರ್ಯವನ್ನು ಹೊಂದಿದ ಈ ಪ್ರದೇಶ ನಮ್ಮ ಸಾಂಸ್ಕೃತಿಕ ವೈವಿಧ್ಯದ ಪ್ರತೀಕವೆನಿಸಿದೆ. ಹೀಗಿದ್ದೂ ಪೂರ್ವಾಂಚಲ ಇಂದು ಭ್ರಷ್ಟಾಚಾರ, ಭಯೋತ್ಪಾದಕರು, ತೀವ್ರಗಾಮಿಗಳು, ದುರಾಡಳಿತ, ನುಸುಳುಕೋರರು, ಜೊತೆಗೆ ಈ ಭಾಗದ ಹೆಚ್ಚಿನ ರಾಜ್ಯಗಳಲ್ಲಿ ಆಡಳಿತ ಹೊಂದಿದ ಕಾಂಗ್ರೆಸ್‌ನ ವೋಟ್ ಬ್ಯಾಂಕ್ ರಾಜಕೀಯದಿಂದ ತತ್ತರಿಸಿ ಹೋಗಿದೆ. ಇವೆಲ್ಲವೂ ಈ ಭಾಗದ ಆಸ್ಸಾಂನಿಂದ ರಾಜ್ಯಸಭೆಗೆ ಆರಿಸಿ ಬಂದಿರುವ ಪ್ರಧಾನಿ ಡಾ. ಮನಮೋಹನ್ ಸಿಂಗ್‌ರವರ ಆಡಳಿತದಲ್ಲೇ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಹದಗೆಟ್ಟ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲಲು ಹಾಗೂ ಈ ಭಾಗದ ಜನರ ಜೊತೆ ನಾವಿದ್ದೇವೆ ಎಂಬುದನ್ನು ಪ್ರಸ್ತುತಪಡಿಸಲು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ವಿಶೇಷ ನಿರ್ಣಯವೊಂದನ್ನು ಅಂಗೀಕರಿಸಿದೆ.

**ಬಾಂಗ್ಲಾದೇಶದಿಂದ ನುಸುಳುಕೋರರು:** ಆಸ್ಸಾಂ ಹಾಗೂ ಪೂರ್ವಾಂಚಲದ ಇತರ ರಾಜ್ಯಗಳು ಮತ್ತು ದಿಲ್ಲಿಯಂತಹ ಪ್ರದೇಶಕ್ಕೂ ಬಾಂಗ್ಲಾ ನುಸುಳುಕೋರರಿಂದ ಆಗುತ್ತಿರುವ ಅನಾಹುತ ಅಷ್ಟಿಷ್ಟಲ್ಲ. ಆಸ್ಸಾಂನಲ್ಲಂತೂ ಜನಗಣತಿಯ ಅಂಶಗಳು ಈ ಸಮಸ್ಯೆಯ ಭಯಾನಕತೆಯನ್ನು ತೆರೆದಿಟ್ಟಿವೆ. 1991ರಲ್ಲಿ ಆಸ್ಸಾಂನಲ್ಲಿ 1.18ಕೋಟಿ ಮತದಾರರಿದ್ದರು. 2001ರಲ್ಲಿ ಇದು 1.44ಕೋಟಿಗೆ ಏರಿದರೆ 2010ರಲ್ಲಿ 1.79ಕೋಟಿಗೆ ಏರಿದ್ದು 2 ದಶಕಗಳಲ್ಲಿ 61 ಲಕ್ಷದಷ್ಟು ಏರಿಕೆ ಕಂಡಿದೆ. ರಾಜ್ಯದ 126 ವಿಧಾನಸಭಾ ಕ್ಷೇತ್ರಗಳ ಪೈಕಿ 82ರಲ್ಲಿ 2004ರ ಲೋಕಸಭಾ ಹಾಗೂ 2006ರ ವಿಧಾನಸಭಾ ಚುನಾವಣೆಗಳ ನಡುವೆ ಶೇ. 7 ರಷ್ಟು ಮತದಾರರ ವೃದ್ಧಿಕಂಡಿದೆ. 1999 ಹಾಗೂ 2004 ರ ನಡುವೆ ಭಾರತದ ಇತರ ಕ್ಷೇತ್ರಗಳಲ್ಲಿ ಮತದಾರ ಸಂಖ್ಯೆಯ ವೃದ್ಧಿ ಶೇ. 1.67 ರಷ್ಟಿದ್ದು ಆಸ್ಸಾಂನ ವೃದ್ಧಿಯ ಅನುಪಾತದಿಂದ ಗಂಭೀರತೆಯ ಅರಿವಾಗುತ್ತದೆ. ಈ 82 ಕ್ಷೇತ್ರಗಳ ಪೈಕಿ 18 ಕ್ಷೇತ್ರಗಳು ಶೇ. 10ಕ್ಕಿಂತ ಹೆಚ್ಚು ಏರಿಕೆ ಕಂಡಿದ್ದು ಢೆಕ್ಯಾಜುಲಿ ಕ್ಷೇತ್ರ ಶೇ. 22.5ರಷ್ಟು ಏರಿಕೆ ಕಂಡಿದೆ. ಹೆಚ್ಚುತ್ತಿರುವ ನುಸುಳುಕೋರತನದಿಂದ ಈ ಭಾಗದ ಸಾಮಾಜಿಕ ವ್ಯವಸ್ಥೆಯ ಜೊತೆ ದೇಶದ ರಾಜಕೀಯ ವ್ಯವಸ್ಥೆಯೂ ಏರುಪೇರು ಕಾಣಲಿದೆ. ಇದಕ್ಕೆ ಕಡಿವಾಣ ಹಾಕದಿದ್ದಲ್ಲಿ ಕೆಲವೇ ವರ್ಷಗಳಲ್ಲಿ

ಓರ್ವ ನುಸುಳುಕೋರನೇ ಆಸ್ಸಾಂನ ಮುಖ್ಯಮಂತ್ರಿ ಸ್ಥಾನಕ್ಕೇರುವ ಎಲ್ಲಾ ಸಾಧ್ಯತೆಯೂ ಇದೆ.

ಅನೇಕರಿಂದ ಈ ಸಮಸ್ಯೆಯ ಬಗ್ಗೆ ತಿಳುವಳಿಕೆ ನೀಡಿದ ಮೇಲೂ ಕಾಂಗ್ರೆಸ್ ಪಕ್ಷ ಈ ಸಮಸ್ಯೆಯನ್ನು ಕಡೆಗಣಿಸಿ ಕೂತಿರುವುದಷ್ಟೇ ಅಲ್ಲ, ಈ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವನ್ನೂ ಕಡೆಗಣಿಸಿದೆ. 1983ರಲ್ಲಿ ಕಾಂಗ್ರೆಸ್ ಜಾರಿಗೆ ತಂದ ಐಎಂಡಿಟಿ ಕಾಯ್ದೆಯಿಂದಾಗಿ ಆಸ್ಸಾಂನ ಯಾವ ನಾಗರಿಕರಿಗೂ ನುಸುಳುಕೋರರನ್ನು ಪತ್ತೆಹಚ್ಚಲು ಹಾಗೂ ಹೊರತಳ್ಳಲು ಸಾಧ್ಯವಾಗುತ್ತಿಲ್ಲ. ನುಸುಳುಕೋರರನ್ನು ಪತ್ತೆಹಚ್ಚುವ ಉದ್ದೇಶ ತೋರಿಸಿ ತಂದ ಈ ಕಾಯ್ದೆ ಅವರಿಗೆ ಈಗ ರಕ್ಷಣೆ ನೀಡುವ ಕಾಯ್ದೆಯಾಗಿ ಪರಿಣಮಿಸಿದೆ. 1946ರ ವಿದೇಶಿ ಪ್ರಜೆಗೆ ಸಂಬಂಧಿಸಿದ ಕಾಯ್ದೆಯ ಅಡಿಯಲ್ಲಿ ಭಾರತೀಯ ನಾಗರಿಕನೆಂದು ಪ್ರಮಾಣೀಕರಿಸುವ ಜವಾಬ್ದಾರಿ ವಿದೇಶಿಯರ ಮೇಲಿತ್ತು. ಆದರೆ ಐಎಂಡಿಟಿ ಕಾಯ್ದೆಯ ಪ್ರಕಾರ ಈ ಜವಾಬ್ದಾರಿ ನುಸುಳುಕೋರರ ಬಗ್ಗೆ ದೂರು ನೀಡಿದವರ ಮೇಲಿದೆ. ಈ ಅಸಮರ್ಪಕ ಕಾಯ್ದೆಯ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದಾಗ ಕೇಂದ್ರದ ಎನ್‌ಡಿಎ ಸರ್ಕಾರ ಆಸ್ಸಾಂಗೆ ಅನ್ವಯಿಸುವಂತೆ ತರಲಾದ ಈ ಕಾಯ್ದೆ ದೇಶದ ಸಮಗ್ರತೆಗೆ ವಿರೋಧವಾಗಿದೆಯೆಂದು ವಾದಿಸಿತ್ತು ಆದರೆ 2004ರ ಯುಪಿಎ ಸರ್ಕಾರ ಅಫಿಡೆವಿಟ್ ನೀಡಿ ಐಎಂಡಿಟಿ ಕಾಯ್ದೆಯನ್ನು ಆಸ್ಸಾಂಗೆ ಅನ್ವಯಿಸುವಂತೆ ಮುಂದುವರಿಸುವಂತೆ ಹೇಳಿಕೆ ನೀಡಿತು. ಇದರಿಂದಾಗಿ ನುಸುಳುಕೋರರ ವಿರುದ್ಧ ಕಾಂಗ್ರೆಸ್ ಕಿಂಚಿತ್ತೂ ಕ್ರಮಕೈಗೊಳ್ಳಲು ತಯಾರಿಲ್ಲವೆಂಬುದು ಪ್ರಮಾಣಿತವಾಗುತ್ತದೆ.

ಸರ್ವೋಚ್ಚ ನ್ಯಾಯಾಲಯವು ಇಡೀ ಸಮಸ್ಯೆಯನ್ನು ಅಮೂಲಾಗ್ರವಾಗಿ ಪರಿಶೀಲಿಸಿತು. ಐತಿಹಾಸಿಕ ಹಿನ್ನೆಲೆ, ನಿರಂತರ ನುಸುಳುವಿಕೆಯ ಗಂಭೀರತೆಯ ಬಗ್ಗೆ ಅಂದಿನ ರಾಜ್ಯಪಾಲರ ವರದಿಯನ್ನೂ ಪರಿಗಣಿಸಿತು. ಅದರ ಆಧಾರದ ಮೇಲೆ ಬಾಂಗ್ಲಾದೇಶಿ ನುಸುಳುಕೋರರಿಂದಾಗಿ ಆಸ್ಸಾಂ, ಹೊರಗಿನ ಆಕ್ರಮಣ ಹಾಗೂ ಒಳಗಿನ ಅಶಾಂತಿಗೆ ತುತ್ತಾಗಿದೆ. ಹೀಗಾಗಿ ಪೂರ್ವಾಂಚಲದ ಏಕತೆ ಹಾಗೂ ಸಮಗ್ರತೆಯನ್ನು ಕಾಪಾಡಲು ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಅದು ಸೂಚಿಸಿತು. ಜೊತೆಗೆ ಐಎಂಡಿಟಿ ಕಾಯ್ದೆಯು ಅಸಂವಿಧಾನಿಕವಾಗಿದ್ದು, ವಿದೇಶಿ ಪ್ರಜೆ ಕಾಯ್ದೆ ಹಾಗೂ 1964ರ ವಿದೇಶಿ ಪ್ರಜೆ ಆಯೋಗದಲ್ಲಿ ಸೂಚಿಸಿದ ನಿಯಮಗನುಗುಣವಾಗಿ ನುಸುಳುಕೋರರ ಬಗೆಗಿನ ದೂರುಗಳ ವಿಚಾರಣೆ ನಡೆಸುವಂತೆ ಅದು ತನ್ನ ಜುಲೈ 22, 2005ರ ತೀರ್ಪಿನಲ್ಲಿ ಸೂಚಿಸಿತು.

ಆದರೆ ಈ ತೀರ್ಪಿನ ಅಂಶಕ್ಕನುಗುಣವಾಗಿ ನಡೆಯುವುದನ್ನು ಬಿಟ್ಟು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಈ ಅಂಶಗಳನ್ನು ಅನೂರ್ಜಿತಗೊಳಿಸುವ ನಾಚಿಕೆಗೇಡಿನ ಕೆಲಸಮಾಡಿತು. ಅದು 1964ರ ವಿದೇಶಿ ಪ್ರಜೆ ಕಾಯ್ದೆಗೆ ತಿದ್ದುಪಡಿಯನ್ನು ತಂದು ಈ ಕಾಯ್ದೆ ಆಸ್ಸಾಂಗೆ ಅನ್ವಯಿಸುವುದಿಲ್ಲವೆಂದು 2006ರಲ್ಲಿ ಪ್ರಕಟಣೆ ಮಾಡಿತು. ಇದರರ್ಥವೆಂದರೆ ನುಸುಳುಕೋರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗದಿರುವುದು. ಸರ್ವೋಚ್ಚ ನ್ಯಾಯಾಲಯವು ಡಿಸೆಂಬರ್ 5, 2006ರ ತನ್ನ ಎರಡನೇ ತೀರ್ಪಿನಲ್ಲಿ 2006ರ ಈ ತಿದ್ದುಪಡಿಯು ತನ್ನ ಮೊದಲನೇ ತೀರ್ಪಿನ ಅಂಶಗಳನ್ನು ಪಾಲಿಸದಿರಲು ಕೇಂದ್ರ ಕೈಗೊಂಡ ಕ್ರಮವೆಂದು ಅಭಿಪ್ರಾಯಪಟ್ಟಿತು. ಅಕ್ರಮ ನುಸುಳುಕೋರರನ್ನು ಹೊರಹಾಕಲು ಇಚ್ಛಾಶಕ್ತಿಯ ಕೊರತೆ ಇರುವುದನ್ನು ಅದು ಎತ್ತಿ ತೋರಿಸಿತು. ಅದು 2006ರ ಸರ್ಕಾರಿ ಪ್ರಕಟಣೆಯನ್ನು ರದ್ದುಗೊಳಿಸುತ್ತಾ ವಿದೇಶಿ ಪ್ರಜೆ ಕಾಯ್ದೆಗನುಗುಣವಾಗಿ ಅಕ್ರಮ ನುಸುಳುಕೋರರನ್ನು ಪತ್ತೆಮಾಡಿ ಹೊರಹಾಕುವಂತೆ ಸೂಚಿಸಿತು.

ಆಸ್ಸಾಂನ ಕಾಂಗ್ರೆಸ್ ಸರ್ಕಾರವು ಕೇಂದ್ರ ಸರ್ಕಾರದ ಸಹಾಯದೊಂದಿಗೆ ಕೇವಲ ತನ್ನ ವೋಟ್ ಬ್ಯಾಂಕ್ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಅಕ್ರಮ ನುಸುಳುಕೋರರಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಬಿಜೆಪಿ ಅಭಿಪ್ರಾಯ ಪಡುತ್ತದೆ. ಇದರಿಂದಾಗಿ ಆಸ್ಸಾಂನ ಮೂಲನಿವಾಸಿಗಳು ತಮ್ಮ ಹಿಡಿತ ಕಳೆದುಕೊಳ್ಳುತ್ತಿದ್ದು ಅಕ್ರಮ ವಲಸೆಗಾರರು ಇಲ್ಲಿನ ಸರ್ಕಾರಿ ಭೂಮಿ, ಅರಣ್ಯ ಭೂಮಿ, ಗೋಮಾಳ ಜೊತೆಗೆ ಆದಿವಾಸಿಗಳ ಭೂಮಿಯನ್ನೂ ಆಕ್ರಮಿಸಿಕೊಳ್ಳುತ್ತಿದ್ದಾರೆ. ನದಿಯು ತನ್ನ ಪಾತ್ರ ಬದಲಿಸಿದಾಗ ಉಂಟಾಗುವ ಭೂಪ್ರದೇಶಕ್ಕೂ ಕೂಡ ಸರ್ಕಾರ ಈ ವಲಸೆಗಾರರಿಗೆ ಖಾತಾ ನೀಡಿದೆ. ಈ ವಲಸೆಗಾರರು ಭಯೋತ್ಪಾದನೆ, ತೀವ್ರಗಾಮಿತನ ಹಾಗೂ ದೇಶದ್ರೋಹಿ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದ್ದು ಈ ಭಾಗದ ಏಕತೆಗೆ ಭಂಗವುಂಟುಮಾಡುತ್ತಿದ್ದಾರೆ. ಜೊತೆಗೆ ಅವರು ಪೂರ್ವಾಂಚಲ ಹಾಗೂ ದೇಶದ ಇತರ ಭಾಗದಲ್ಲಿ ಉದ್ಯೋಗಾವಕಾಶಗಳಿಗೂ ಕತ್ತರಿ ಹಾಕುತ್ತಿದ್ದಾರೆ.

ಆಸ್ಸಾಂನಲ್ಲಿ ವಂಶಪಾರಂಪರ್ಯವಾಗಿ ನೆಲೆಸಿರುವ ಮುಸ್ಲಿಂ ಸಮುದಾಯ ನುಸುಳುಕೋರರಾಗಿರದೆ ದೇಶದ ಎಲ್ಲಾ ಹಕ್ಕುಗಳಿಗೆ ಬಾಧ್ಯರಾಗಿದ್ದಾರೆಂದು ಬಿಜೆಪಿ ಅಭಿಪ್ರಾಯ ಪಡುತ್ತದೆ. ಅದೇ ರೀತಿ ಬಾಂಗ್ಲಾದೇಶದಿಂದ ನಾನಾ ರೀತಿಯ ತೊಂದರೆಗೊಳಗಾಗಿ ಹೊರಹಾಕಲ್ಪಟ್ಟ ಹಿಂದುಗಳು ಸಹ ನಮ್ಮ ದೇಶದ ಭಾಗವೆಂದೇ ಬಿಜೆಪಿ ಭಾವಿಸುತ್ತದೆ. ಅವರಿಗೆ ನಮ್ಮ ದೇಶದಲ್ಲಿರಲು ಅವಕಾಶ ಕಲ್ಪಿಸಿಕೊಡಬೇಕು. ದೇಶದ ನಾಗರೀಕರಿಗಿರುವ ಎಲ್ಲಾ ಸೌಲಭ್ಯಗಳನ್ನೂ ಅವರಿಗೆ ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯ.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯು ಈ ಕೆಳಗಿನ ಬೇಡಿಕೆಗಳನ್ನು ಮುಂದಿಡುತ್ತದೆ

1. ಆಸ್ಸಾಂ ಹಾಗೂ ಪೂರ್ವಾಂಚಲದ ಇತರ ಭಾಗಗಳಲ್ಲಿ ನೆಲೆಸಿರುವ ಅಕ್ರಮ ವಲಸೆಗಾರರನ್ನು ಪತ್ತೆಹಚ್ಚಿ ವಿದೇಶಿ ಪ್ರಜೆ ಕಾಯ್ದೆಗನುಗುಣವಾಗಿ ಅವರನ್ನು ಹೊರಹಾಕಲು ಸೂಕ್ತ ಕ್ರಮವನ್ನು ಕೈಗೊಳ್ಳಬೇಕು. ಇದು ಕಾಲಬದ್ಧವಾಗಿ ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕನುಗುಣವಾಗಿ ನಡೆಯಬೇಕು.

2. ಇತ್ತೀಚೆಗೆ ಬಿಜೆಪಿ ಸಲ್ಲಿಸಿದ ಬೇಡಿಕೆಗನುಗುಣವಾಗಿ ಚುನಾವಣಾ ಆಯೋಗವು ಅಕ್ರಮ ವಲಸೆಗಾರರ ಹೆಸರನ್ನು ಮತದಾರ ಪಟ್ಟಿಯಿಂದ ಕೈಬಿಡಬೇಕು. ಸರ್ವೋಚ್ಚ ನ್ಯಾಯಾಲಯದ ಆದೇಶವು ಚುನಾವಣಾ ಆಯೋಗಕ್ಕೆ ಅನ್ವಯವಾಗುವುದರ ಜೊತೆಗೆ ದೇಶದ ಸಂವಿಧಾನದ ಪ್ರಕಾರ ಕೇವಲ ಈ ದೇಶದ ಪ್ರಜೆಗಳು ಮಾತ್ರ ಮತದಾನದಲ್ಲಿ ಪಾಲ್ಗೊಳ್ಳಬಹುದಾಗಿದೆ.

3. ಪೂರ್ವಾಂಚಲ ಭಾಗದಲ್ಲಿ ಬಾಂಗ್ಲಾದೇಶವು ಸೇರಿದಂತೆ ಇತರ ದೇಶಗಳೊಂದಿಗಿನ ಗಡಿಗೆ ಸರಿಯಾದ ಸುರಕ್ಷಾ ಬೇಲಿಯನ್ನು ಹಾಕಬೇಕು. ದೇಶದ ಪಶ್ಚಿಮ ಗಡಿಯಲ್ಲಿ ಈ ರೀತಿಯ ಬೇಲಿಯನ್ನು ಹಾಕಲಾಗಿದೆ. ಎರಡೂ ದೇಶಗಳ ನಡುವಿನ ನದಿ ಪಾತ್ರದಲ್ಲಿ ನುಸುಳುವಿಕೆಯ ವಿರುದ್ಧ ಹೆಚ್ಚಿನ ರಕ್ಷಣೆ ಒದಗಿಸಬೇಕು.

4. ಅಸ್ಸಾಂ ಹಾಗೂ ಪೂರ್ವಾಂಚಲದಲ್ಲಿ ನಡೆದಿರುವ ವ್ಯಾಪಕ ಅಕ್ರಮ ನುಸುಳುವಿಕೆಯ ಹಿನ್ನಲೆಯಲ್ಲಿ ಎಲ್ಲಾ ನಾಗರೀಕರ ಖಡ್ಡಾಯ ನೊಂದಾವಣಿ ನಡೆಸಿ, ರಾಷ್ಟ್ರೀಯ ಗುರುತಿನ ಚೀಟಿ ನೀಡುವುದರ ಜೊತೆಗೆ 1955ರ ನಾಗರೀಕ ಕಾಯ್ದೆ ಪರಿಚ್ಛೇದ 14-ಎಗನುಗುಣವಾಗಿ ರಾಷ್ಟ್ರೀಯ ನಾಗರೀಕ ನೋಂದಣಿ ದಾಖಲೆಯನ್ನು ಸಿದ್ಧಪಡಿಸಬೇಕು.

**ಪೂರ್ವಾಂಚಲದಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ವ್ಯಾಪಕ ಭ್ರಷ್ಟಾಚಾರ:** ಕಾಂಗ್ರೆಸ್ ಆಡಳಿತ ಅಥವಾ ಕಾಂಗ್ರೆಸ್ ನೇತೃತ್ವದ ಆಡಳಿತ ಹೊಂದಿರುವ ಪೂರ್ವಾಂಚಲದ ಹೆಚ್ಚಿನ ರಾಜ್ಯಗಳು ವ್ಯಾಪಕ ಭ್ರಷ್ಟಾಚಾರ, ಸಾರ್ವಜನಿಕ ಹಣದ ಕೊಳ್ಳೆ, ಸ್ವಜನ ಪಕ್ಷಪಾತ ಹಾಗೂ ಬಡಜನರಿಗೆ ಇರುವ ಸೌಲಭ್ಯಗಳನ್ನು ನುಂಗಿಹಾಕುವ ಭ್ರಷ್ಟತೆಯನ್ನು ಮೆರೆದಿವೆ. ಭಾರತ ಸರ್ಕಾರದ ಅನುದಾನವು ಸೇರಿದಂತೆ ಸಾರ್ವಜನಿಕ ಹಣವನ್ನು ಲೂಟಿ ಹೊಡೆಯಲು ಸಚಿವರು ಸೇರಿದಂತೆ ರಾಜಕಾರಣಿಗಳು ಅಧಿಕಾರಿಗಳು, ಗುತ್ತಿಗೆದಾರರು, ಹಾಗೂ ಸರಬರಾಜುದಾರರ ಗುಂಪುಸೇರಿ ಕಾರ್ಯನಿರತವಾಗಿವೆ. ಈ

ಲೂಟಿಯ ಪಾಲಿನಲ್ಲಿ ಆಳುವ ಪಕ್ಷದವರೊಂದಿಗೆ ತೀವ್ರಗಾಮಿಗಳೂ ಸೇರಿದ್ದಾರೆ. ಈ ವ್ಯಾಪಕ ಲೂಟಿಯ ಬಗ್ಗೆ ಬಿಜೆಪಿಯು ಒಂದು ಪುಸ್ತಿಕೆಯನ್ನು ಹೊರತರಲಿದೆ. ಈ ಬಗ್ಗೆ ಮಾನ್ಯ ರಾಷ್ಟ್ರಪತಿಗಳಿಗೆ ಮನವಿಯನ್ನು ಸಲ್ಲಿಸಲಿದ್ದೇವೆ. ಈ ಸಾರ್ವಜನಿಕ ಲೂಟಿಯ ಅಗಾಧತೆಯನ್ನು ಪ್ರಮಾಣೀಕರಿಸುವ ಕೆಲವು ಅಂಶಗಳನ್ನು ಇಲ್ಲಿ ನೀಡಲಾಗಿದೆ.

* ಅಸ್ಸಾಂನ ಉತ್ತರ ಕಾಚಾರ್ ಗುಡ್ಡ ಹಗರಣ, ಸಾರಿಗೆ ಸಬ್ಸಿಡಿ ಹಗರಣ ಹಾಗೂ ನೀರಾವರಿ ಹಗರಣಗಳು ಅಸ್ಸಾಂನ ಆಡಳಿತ ವ್ಯವಸ್ಥೆಗೆ ಭಾರಿ ಹಾನಿ ಉಂಟುಮಾಡಿವೆ. ಉತ್ತರ ಕಾಚಾರ್ ಗುಡ್ಡಗಾಡು ಸ್ವಾಯುತ್ತ ಜಿಲ್ಲಾ ಸಮಿತಿಯಲ್ಲಿ 1000 ಕೋಟಿ ರೂ. ಹಗರಣ ನಡೆದಿರುವ ಅಂಶವನ್ನು ರಾಷ್ಟ್ರೀಯ ತನಿಖಾ ಸಮಿತಿ ಪತ್ತೆಹಚ್ಚಿದೆ. ಈ ಹಗರಣದಲ್ಲಿ ಅನೇಕ ಸಚಿವರು ಹಾಗೂ ಅಧಿಕಾರಿಗಳು ಶಾಮಿಲುದಾರರೆಂದು ಅದು ಕಂಡು ಹಿಡಿದಿದೆ. ಶಾಮಿಲುದಾರೊಬ್ಬರ ಬಳಿಯಿಂದ 13.45 ಕೋಟಿ ರೂ. ನಗದು ಹಣವನ್ನು ವಶಪಡಿಕೊಳ್ಳಲಾಗಿದೆ.

* ಅಸ್ಸಾಂನಲ್ಲಿ ಸುಮಾರು 1 ಕೋಟಿ ಜನ ಬಡತನ ರೇಖೆಗಿಂತ ಕೆಳಗಿರುವರೆಂದು ಘೋಷಿಸಲಾಗಿದೆ. ಈ ಯೋಜನೆಗೆ ಅನುದಾನಗೊಂಡಿರುವ ಅಕ್ಕಿಯ ಶೇ. 50ರಷ್ಟು ಪ್ರಮಾಣ ನೇರವಾಗಿ ಕಾಳಸಂತೆಕೋರರಿಗೆ ತಲುಪುತ್ತಿದೆ. ಸಾರ್ವಜನಿಕ ಪೂರೈಕೆ ವಲಯದಲ್ಲಿ ವ್ಯಾಪಕ ಸೋರವಿಕೆ, ಭ್ರಷ್ಟಾಚಾರ ಹಾಗೂ ಗೋಲ್‌ಮಾಲ್ ನಡೆದಿದೆ.

* ಅರುಣಾಚಲ ಪ್ರದೇಶದಲ್ಲಿ ಹಿಂದಿನ ಕಾಂಗ್ರೆಸ್ ಮುಖ್ಯಮಂತ್ರಿ ಶ್ರೀ ಗೆಗಾಂಗ್ ಅಪಾಂಗ್ ಹಾಗೂ ಆಡಳಿತ ಪಕ್ಷದ ನೂರಕ್ಕೂ ಹೆಚ್ಚು ಪ್ರಮುಖರು ಮತ್ತು ಅಧಿಕಾರಿಗಳು ಸಾರ್ವಜನಿಕ ಪೂರೈಕೆ ವ್ಯವಸ್ಥೆಯಲ್ಲಿ ದೇಶವ್ಯಾಪಿ ಸುದ್ದಿ ಮಾಡಿದ 1000 ಕೋಟಿ ರೂ. ಹಗರಣದಲ್ಲಿ ಶಾಮೀಲಾಗಿರುವುದು ಪತ್ತೆಯಾಗಿದೆ. ಗುವಾಹಟಿ ಉಚ್ಚ ನ್ಯಾಯಾಲಯದ ಆದೇಶದಂತೆ ರಚಿಸಲಾದ ವಿಶೇಷ ತನಿಖಾ ತಂಡವು ಶ್ರೀ ಗೆಗಾಂಗ್ ಅಪಾಂಗ್‌ರವರನ್ನು ಈ ವಿಷಯವಾಗಿ ಬಂಧನಕ್ಕೊಳಪಡಿಸಿತು.

* ಮಣಿಪುರದಲ್ಲಿ ಲೋಕ್‌ತಕ್ ಸರೋವರವನ್ನು ಸ್ವಚ್ಛಗೊಳಿಸುವ ಹೆಸರಿನಲ್ಲಿ 244 ಕೋಟಿ ರೂ. ಹಗರಣ ನಡೆದಿದೆ. ಕೇಂದ್ರ ಸರ್ಕಾರದ ಅನುದಾನದಲ್ಲಿ ನಡೆಯುತ್ತಿರುವ ಈ ಯೋಜನೆಯಲ್ಲಿ ಹಣ ಸಂಪೂರ್ಣ ಸೋರಿ ಹೋಗುತ್ತಿದೆ. ಇದಕ್ಕೆ ಗುತ್ತಿಗೆ ಪಡೆದ ಸಂಸ್ಥೆ ಥೋಂಗೀ ಎಂದು ಪತ್ತೆಯಾಗಿದ್ದು ಮಣಿಪುರ ಮುಖ್ಯಮಂತ್ರಿಗಳಿಗೆ ಸಂಬಂಧ ಹೊಂದಿದೆ ಎಂದು ತಿಳಿದು ಬಂದಿದೆ.

* ಅರುಣಾಚಲ ಪ್ರದೇಶದಲ್ಲಿ ಎಸ್.ಜಿ.ಆರ್.ವೈ. ಹಗರಣ ಹಾಗೂ ಜಲ ವಿದ್ಯುತ್ ಯೋಜನೆ ಹಗರಣಗಳು 2ಜಿ ತರಂಗಾಂತರ ಹಗರಣದಷ್ಟೇ ಕುಖ್ಯಾತಿ ಹೊಂದಿವೆ.

* ನರ್ಮ್ ಯೋಜನೆಯಡಿ ಜಾರಿಗೊಳಿಸಲಾದ ಯೋಜನೆಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದ್ದು ಆಹಾರ ಪೂರೈಕೆ, ಕುಡಿಯುವ ನೀರು, ಅಣೆಕಟ್ಟುಗಳ ನಿರ್ಮಾಣ ಹಾಗೂ ಉದ್ಯೋಗ ನೀಡುವಿಕೆಗಳಲ್ಲೂ ಭ್ರಷ್ಟಾಚಾರ ನಡೆಸಲಾಗಿದೆ.

* ಪೂರ್ವಾಂಚಲದಲ್ಲಿ ಗಣಿಗಾರಿಕೆಯು ಭಾರೀ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಟ್ಟಿದೆ.

ಸಾರ್ವಜನಿಕರಿಗೆ ಹಾಗೂ ಬಡವರಿಗಾಗಿ ಮೀಸಲಿಟ್ಟ ಈ ಭಾರೀ ಮೊತ್ತಗಳಲ್ಲಿನ ಅವ್ಯವಹಾರದ ಬಗ್ಗೆ ವ್ಯಾಪಕ ಚಳುವಳಿ ನಡೆಸಲು ಬಿಜೆಪಿ ಬದ್ಧವಾಗಿದೆ. ವ್ಯಾಪಕ ಭ್ರಷ್ಟಾಚಾರವು ಪೂರ್ವಾಂಚಲವನ್ನು ಇನ್ನಿಷ್ಟು ದುರ್ಬಲಗೊಳಿಸಿದೆ. ಸಿ.ಎ.ಜಿ., ಮಾಧ್ಯಮ ಹಾಗೂ ನ್ಯಾಯಾಲಯಗಳು ಕೂಡ ಈ ಭ್ರಷ್ಟಾಚಾರದ ಬಗ್ಗೆ ಟಿಪ್ಪಣಿ ಮಾಡಿವೆ. ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯು ಈ ಕೆಳಗಿನಂತೆ ಒತ್ತಾಯಿಸುತ್ತದೆ.

1. ಎನ್.ಐ.ಎ., ಸಿ.ಬಿ.ಐ., ಹಾಗೂ ಇತರ ಸಂಸ್ಥೆಗಳಿಂದ ಸೂಕ್ತ ತನಿಖೆನಡೆಸಿ ಅಪರಾಧಿಗಳನ್ನು ಶಿಕ್ಷಿಸಲು ತೀವ್ರಗತಿ ನ್ಯಾಯಾಲಯವನ್ನು ರಚಿಸಬೇಕು.

2. ಈ ಎಲ್ಲಾ ಹಗರಣಗಳ ಬಗ್ಗೆ ವಿಶೇಷ ಲೆಕ್ಕ ತನಿಖೆ ನಡೆಸಬೇಕು.

3. ಹಗರಣದಲ್ಲಿ ಭಾಗಿಯಾದ ಎಲ್ಲಾ ಸಚಿವರು ಹಾಗೂ ಅಧಿಕಾರಿಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.

## ಪೂರ್ವಾಂಚಲಕ್ಕೆ ಆಯಕಟ್ಟಿನ ರಕ್ಷಣೆ

ಪೂರ್ವಾಂಚಲವು ಆರ್ಥಿಕ ವಲಯವಾಗಿದ್ದು ಯಾವುದೇ ದೇಶ ಅಥವಾ ಸಂಸ್ಥೆಯ ಮೂಲಕ ಈ ಭಾಗದ ಮೇಲೆ ಹತೋಟಿ ಸಾಧಿಸಿದಲ್ಲಿ ಇತರ ಭಾಗದ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡಲು ಸಾಧ್ಯವಿದೆ. ಚೀನಾ, ಅರುಣಾಚಲ ಪ್ರದೇಶದ ಮೇಲೆ ಕಣ್ಣಿಟ್ಟಿದೆ. ಬ್ರಹ್ಮಪುತ್ರ ನದಿಗೆ ಅಣೆಕಟ್ಟು ನಿರ್ಮಿಸುವ ಚೀನಾದ ಹುನ್ನಾರ ನಮ್ಮ ದೇಶದ ಜನರ ಬದುಕಿಗೆ ಹೊಡೆತ ನೀಡಲಿದೆ. ಕೇಂದ್ರ ಸರ್ಕಾರ ಈ ಬಗ್ಗೆ ತೀವ್ರ ಗಮನ ಹರಿಸಬೇಕು. ಬಾಂಗ್ಲಾದೇಶದಲ್ಲಿ ಐ.ಎಸ್.ಐ ಚಟುವಟಿಕೆ ತೀವ್ರಗೊಂಡಿದ್ದು ನಮ್ಮ ದೇಶದೊಳಗಿನ ಕೆಲವು ಜಿಹಾದಿ ಸಂಘಟನೆಗಳೊಂದಿಗೆ ಸೇರಿ ಭದ್ರತೆಗೆ ಧಕ್ಕೆ ತಂದಿವೆ.

ಅಸ್ಸಾಂ ಚುನಾವಣೆ ಸಮೀಪಿಸುತ್ತಿದ್ದಂತೆ ಅಸ್ಸಾಂ ಸರ್ಕಾರ ಉಲ್ಫಾ ತೀವ್ರಗಾಮಿ ಗಳೊಂದಿಗೆ ಮಾತುಕತೆಗೆ ಮುಂದಾಗಿರುವುದು ಸೋಜಿಗದ ಸಂಗತಿ. ಉಲ್ಫಾ ಜೊತೆ ಕಾಂಗ್ರೆಸ್ ಚುನಾವಣಾ ದೃಷ್ಟಿಯಿಂದ ಶಾಮೀಲಾಗಿರುವ ಸಂಗತಿ ಹೊಸತೇನಲ್ಲ. ಉಲ್ಫಾ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಭೂತಾನ್ ಸಹ ಈ ಬೆಳವಣಿಗೆಯನ್ನು ವಿರೋಧಿಸಿದೆ. ಬಾಂಗ್ಲದಲ್ಲಿಯೂ ಉಲ್ಫಾ ಚಟುವಟಿಕೆ ಇರುವುದರಿಂದ ಬಾಂಗ್ಲಾ ಸಹ ಈ ಬೆಳವಣಿಗೆಯನ್ನು ಮೆಚ್ಚುವುದಿಲ್ಲ.

ಉಲ್ಫಾದ ಕೆಲ ನಾಯಕರ ಬಿಡುಗಡೆಯ ಶರತ್ತುಗಳೇನೆಂಬುದು ತಿಳಿದಿಲ್ಲ. ಉಲ್ಫಾ ಜೊತೆಗಿನ ಮಾತುಕತೆ ಸಂವಿಧಾನದ ಚೌಕಟ್ಟಿನೊಳಗೆ ನಡೆಯಬೇಕೆಂಬುದು ಬಿಜೆಪಿಯ ಒತ್ತಾಯ. ಈ ಮಾತುಕತೆ ದೂರಗಾಮಿ ದೃಷ್ಟಿಹೊಂದಿರುವುದರ ಜೊತೆ ಶಸ್ತ್ರಾಸ್ತ್ರ ಬಳಸಿದ ಹೋರಾಟಗಳನ್ನು ವಿರೋಧಿಸಬೇಕೆಂಬುದೂ ನಮ್ಮ ಒತ್ತಾಯ. ಚುನಾವಣಾ ದೃಷ್ಟಿಯಿಂದ ನಡೆಸುವ ಮಾತುಕತೆಗಳು ಖಂಡನೀಯ. ಹೀಗಾಗಿ ಪೂರ್ವಾಂಚಲದ ರಕ್ಷಣೆಯನ್ನು ಕೇವಲ ರಾಜಕೀಯ ಹಿನ್ನೆಲೆಯಲ್ಲಿ ನೋಡದೆ ವಿದೇಶ ನೀತಿ, ಸೈನ್ಯ, ಆಂತರಿಕ ಹಾಗೂ ಆಯಕಟ್ಟಿನ ರಕ್ಷಣೆ ಹಾಗೂ ಆರ್ಥಿಕ ವ್ಯವಸ್ಥೆಯ ಭದ್ರತೆಯ ದೃಷ್ಟಿಯಿಂದ ನೋಡಬೇಕಿದೆ. ಕೇಂದ್ರದಲ್ಲಿ ಎನ್‌ಡಿಎ ಆಡಳಿತದಲ್ಲಿ ಪೂರ್ವಾಂಚಲ ವ್ಯವಹಾರಗಳ ಬಗ್ಗೆ ವಿಶೇಷ ಖಾತೆ ತೆರೆಯುವುದರ ಜೊತೆ ಈ ಭಾಗದ ಅಭಿವೃದ್ಧಿಗೆ ಪೂರಕ ಯೋಜನೆ ರೂಪಿಸಲಾಗಿತ್ತು. ಸುರಕ್ಷಿತ ಪೂರ್ವಾಂಚಲ ನಮ್ಮ ದೇಶಕ್ಕೆ ಅವಶ್ಯಕ. ರಾಷ್ಟ್ರೀಯ ಸುರಕ್ಷಾ ಸಮಿತಿಯ ಅಡಿಯಲ್ಲಿ ಈ ಭಾಗದ ರಕ್ಷಣೆಯ ಬಗ್ಗೆ ವ್ಯವಸ್ಥೆ ಕೈಗೊಳ್ಳಬೇಕು. ಕೇಂದ್ರವು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕು.

ಕೊನೆಯದಾಗಿ ರಾಜಧಾನಿ ದೆಹಲಿಯಿಂದ 1600ರಿಂದ 2000 ಕಿ.ಮೀ. ದೂರವಿರುವ ಪೂರ್ವಾಂಚಲದಲ್ಲಿ ಮೂಲಭೂತ ಸೌಕರ್ಯ ನಿರ್ಮಾಣಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕ್ರಮಕೈಗೊಳ್ಳಬೇಕು. ಎನ್‌ಡಿಎ ಆಳ್ವಿಕೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಯೋಜನೆಯನ್ನು ಪೂರ್ವಾಂಚಲದವರೆಗೂ ವಿಸ್ತರಿಸಲು ಕ್ರಮಕೈಗೊಳ್ಳಲಾಗಿತ್ತು. ಅದನ್ನು ಕೈಬಿಡಲಾಗಿದೆ. ಇದು ತೀವ್ರ ಖಂಡನೀಯ. ●

ಧ್ಯೇಯ ಕಮಲ ಮಾಸ ಪತ್ರಿಕೆ

ಧ್ಯೇಯಕಮಲ ಪತ್ರಿಕೆಗೆ ತಮ್ಮ ವಾರ್ಷಿಕ ಚಂದಾ ಅವಧಿ ಮುಕ್ತಾಯಗೊಳ್ಳುವ ತಿಂಗಳನ್ನು ಈ ಸಂಚಿಕೆಗೆ ಅಂಟಿಸಿರುವ ತಮ್ಮ ವಿಳಾಸದ ಚೀಟಿಯ ಮೂಲೆ ಭಾಗದಲ್ಲಿ ನಮೂದಿಸಲಾಗಿದೆ. ದಯವಿಟ್ಟು ಅವಧಿಗೆ ಮುನ್ನ ರೂ. 100/- ವಾರ್ಷಿಕ ಚಂದಾ ಹಣವನ್ನು ಎಂ.ಓ.ಮೂಲಕ 'ಧ್ಯೇಯಕಮಲ' ಕಾರ್ಯಾಲಯಕ್ಕೆ ಕಳುಹಿಸಿತಮ್ಮ ಚಂದಾ ಸದಸ್ಯತ್ವವನ್ನು ನವೀಕರಿಸುವುದು. ವಿವರಗಳಿಗೆ ಧ್ಯೇಯ ಕಮಲ ಪ್ರಕಾಶ